ಆನಂದ ಕುಟೀರ, ಪುತ್ತೂರು 12.02.2000

ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ, ಮೃತ್ಯೋರ್ಮಾ ಅಮೃತಂಗಮಯ ಈ ಮೂರು ಶಬ್ದಗಳಲ್ಲಿ ಇಡೀssss ಇರೋದು. ತ್ರಿಪುಟಿ ನಾಶ ಅಂತ್ಹೇಳಿ ನಾವು ಹೇಳುವಾಗ, ಗೋವಿಂದಾಚಾರ್ಯರು ಹೇಳಿದ್ರು . . . . . ಯಾವುದು ಅದು. ಮೂರು – ಮಾಡುವವನು, ಮಾಡಲ್ಪಡುವವನು ಮತ್ತು ಕ್ರಿಯೆ – ಇದು ಮೂರು ಹೋಗಬೇಕು ಅಂತ ಹೇಳಿಯಾಯ್ತು ನಮ್ಗೆ. ಧ್ಯಾನ ಮಾಡುವವನು ಮಾಡಲ್ಪಡುವವನೇ ಆಗುತ್ತಾನೆ. ಅಲ್ಲಿಂದ ಪ್ರಾರಂಭ. ಕೀಟವು ಭ್ರಮರವೇ ಆಯಿತು. ಆ ಭ್ರಮರ ಉಳಿತದ ಮತ್ತೆ. ಒಂದು ದಿನ ಆ ಭ್ರಮರವೇ ಇಲ್ಲ. ಹಾಗಾದ್ರೆ ಕೀಟವೂ ಇಲ್ಲ, ಭ್ರಮರವೂ ಇಲ್ಲ. ಎಂಥಾ ಕತೆ ಇದು. ಧ್ಯಾನ ಮಾಡ್ತಾ ಮಾಡ್ತಾ ಅವ್ನು ಏನಾದ ಪರಮಾತ್ಮನೇ ಆದ. ಅವನು ತನ್ನ ಅಸ್ತಿತ್ವವನ್ನು ಕಳಕೊಳ್ಳುವಂಥಾದ್ದು. ನದಿ ಮತ್ತು ಸಾಗರ ಆ್ಞಂ. ಈ ನದಿ ನಿಜವಾಗಿ ಸಾಗರಕ್ಕೆ ಹೋಗಿ ಕೂಡ್ಲಿಕ್ಕೆ ಏನಾಗ್ಬೇಕು. ಎಷ್ಟು ಕೆಲಸಗಳುಂಟು. ಉಪನದಿಗಳನ್ನು ಸೇರಿಸಿಕೊಂಡು ಹೋಗ್ಬೇಕು. ಇದು ಸ್ವಭಾವಸಿದ್ಧವಾದ್ದು. ಅದು ಹೋಗಿ ಸಾಗರವನ್ನು ಸೇರಿತು. ಸಾಗರವೇ ಆಯ್ತು. ಸಾಗರವು ತನ್ನ ಅಸ್ತಿತ್ವವನ್ನು ಕಳಕೊಂಡಾಗ ನದಿಯೂ ಇಲ್ಲ, ಸಾಗರವೂ ಇಲ್ಲ. ಆ್ಞಂ. ನದಿಂತು ಉಪಮಾನ ಹೆಚ್ಚಾಗಿ ಕೊಡೋದು ನಾವು. ನದಿಯ ಮೂಲವನ್ನು ಶೋಧನೆ ಮಾಡು. ಇದೇ ರೀತಿ ಮನಸ್ಸಿನ ಮೂಲವನ್ನು ಶೋಧನೆ ಮಾಡುವಾಗ, ಈ ಮನಸ್ಸನ್ನು ಮೂಲದಲ್ಲಿ ಕೇಂದ್ರೀಕರಿಸಿ ಶೋಧನೆ. ಮೂಲದಲ್ಲಿ ಕೇಂದ್ರೀಕರಿಸೋದು ಅಂದ್ರೆ ಎಲ್ಲಿ? ಪರಮಾತ್ಮನಲ್ಲಿ. ಅದು ಪರಮಾತ್ಮನು ಹೇಗೆ ಆದ, ಜೀವಾತ್ಮನಿದ್ದ. ಅವನು ಪರಿವರ್ತನೆ ಹೊಂದಿ ಪರಮಾತ್ಮನೇ ಆದ. ಇಷ್ಟು ಕೆಲಸ ಆಗ್ಬೇಕು. ಎಲ್ಲ ಪಾಯಿಂಟ್‌ಗಳನ್ನು ಕೊಡ್ತದೆ. ಉಳಿದವರು ವಿಮರ್ಶೆ ಮಾಡ್ಬೇಕು. ಇದಕ್ಕೆ ಸಾಹಿತಿಗಳು ಬೇಕು.

ಒಳಗೆ ವಿಚಾರಗಳು ಹೊಳಿತದೆ. ಅದು ಒಂದೊಂದೆ ಹೊರಗೆ ಹಾಕ್ತದೆ. ಯಂತ್ರದಲ್ಲಿ ಆದ ಹಾಗೆ. ಒಳಗೆ ಆದಾಗ ಮಾತ್ರ ನೋಡಿ ಅದು ಬರೋದು ಅಲ್ಲಿ. ಹೊರಗೆ ಅವನ ವೇಷ ಭೂಷಣದಿಂದ ಯಾವುದಾದ್ರೂ ಕೂಡ ಸಾಧ್ಯವಿಲ್ಲ. ಒಳಗೆ ಆಗಾಗ ನೋಡಿ. ಅಷ್ಟೆ. ಅಷ್ಟು ಕೆಲಸ ಆಗ್ಬೇಕು. ಫೌಂಡೇಷನ್ ಎಲ್ಲ ಬಿದ್ದಿದೆ. ಏನೋ ಸ್ವಲ್ಪ ಬಾಕಿ ಇದೆ. ಮೂರು ಶಬ್ದಗಳು ಒಟ್ಟಾರೆ – ಅಸತೋಮಾ, ಅಸತ್ತಿನ ಮಧ್ಯದಲ್ಲಿ ಸತ್ಯ ಉಂಟು. ಹಾಗಾದ್ರೆ ಈ ಅಸತ್ತಿಗೆ ಮಹತ್ವ ಕೊಡ್ಬೇಕು. ಕತ್ತಲೆ ಮಧ್ಯದಲ್ಲಿ ಬೆಳಕುಂಟು. ಹಾಗಾದ್ರೆ ಈ ಕತ್ತಲೆಯನ್ನು ಸ್ವೀಕಾರ ಮಾಡ್ಬೇಕು. ಮೃತ್ಯುವಿನ ಮಧ್ಯದಲ್ಲಿ ಅಮೃತತ್ವ ಉಂಟು. ಈ ಮೃತ್ಯುವನ್ನು ಸ್ವೀಕಾರ ಮಾಡ್ಬೇಕು. ಇದು ಮೂರೇ ಪ್ರಾಮುಖ್ಯವಾದ್ದು. ಈ ರಾಮಾಯಣ, ಮಹಾಭಾರತಗಳನ್ನು, ವೇದಗಳನ್ನು ಎಷ್ಟು ಕಲಿತ್ರೂ . . . . . ಯಾಕೆ ಅದು. ಆ್ಞಂ. ಯಾಕೆ? ಅದು ಎಷ್ಟು ಬಾಯಿಪಾಠ ಮಾಡಿದ್ರೂ ಆಗೋದಿಲ್ಲ. ಹ. ಹ. ಹ.

*****

ಆನಂದ ಕುಟೀರ, ಪುತ್ತೂರು ಪರೀಕ್ಷಿತನೊಡನೆ 13-02-2000

ಪರೀಕ್ಷಿತ – ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮನಿಗೂ ಅವನು ಸೃಷ್ಟಿಕರ್ತ ಪರಮಾತ್ಮ . . . ಆದ್ರಿಂದ ಅವನನ್ನು ಸೃಷ್ಟಿಕರ್ತ ಅಂತ ಹೇಳಿದ್ದು. ಜಗತ್ತನ್ನು ಸೃಷ್ಟಿಮಾಡಿದಾ ಅಂತ್ಹೇಳಿ ಪರಮಾತ್ಮನಿಗೆ ಸೃಷ್ಟಿಕರ್ತ ಅಂತ ಹೇಳಿದ್ದಲ್ಲ.

ಅಜ್ಜ – ಹಾಗಾದ್ರೆ ಸ್ವತಃ ಉಂಟಾದದ್ದು ಯಾವ್ದು? ಅಂದ್ರೆ ಮೂಲ ಶಕ್ತಿ. ಅಂದ್ರೆ ಹೇಳ್ತದಪ್ಪ ಮಾಯೆ. ಮಾಯಾ ಶಕ್ತಿ ಅಂತ. ಈ ಮಾಯೆ ಜಡ. ಇದು ಅದನ್ನು ಬಿಟ್ಟಿಲ್ಲ. ಇದಕ್ಕೆ ಚಲನೆಗೆ ಅದು ಬೇಕಲ್ಲ.

ಪರೀಕ್ಷಿತ – ಕರೆಕ್ಟ್. ಅದೆಲ್ಲ ಸರೀ ಬರ್ತದೆ.

ಅಜ್ಜ – ಆತ್ಮ ಬೇಕು. ಆತ್ಮ ಇದ್ದ ಕಾರಣ ಇದಕ್ಕೆ ಚಲನೆ ಬಂತು.

ಪರೀಕ್ಷಿತ – ಕರೆಕ್ಟ್. ಪರಮಾತ್ಮ ಮತ್ತು ಚತುರ್ಮುಖಬ್ರಹ್ಮನಿಗೆ. ಒಂದೇ ಪಾಯಿಂಟು. ಸರೀ ಬರ್ತದೆ. ಚತುರ್ಮುಖಬ್ರಹ್ಮ ಅಂದ್ರೆ ಅದು ಅದು ಮಾಯೆ.

ಅಜ್ಜ – ಸ್ವಯಂ ಪ್ರಕಾಶದಿಂದ ಸ್ವತಃ ಉಂಟಾದವನು ನಾನು.

ಪರೀಕ್ಷಿತ – ಈಗ ಸ್ವಯಂ ಪ್ರಕಾಶದಿಂದ ಒಂದು ಶಕ್ತಿ, ಏನೇ ಆಗ್ಲಿ ಅದು. ಅದು ಅದರಷ್ಟಕ್ಕೆ ಅದರಂತೆಯೇ ಉಂಟಾಗುವುದು ಹೇಗೆ.

ಅಜ್ಜ – ಇದು ಕಾಣಿಸಿಕೊಂಡಿತು. ಅದರ ಮೇಲೆ.

ಪರೀಕ್ಷಿತ – ಹಾಗಾದ್ರೆ ಅದಕ್ಕೆ ಯಾವಾಗ್ಲೂ ಉಂಟಾಗ್ಬೋದು. ಯಾವಾಗ್ಲೂ ಇಲ್ಲದೆ ಆಗ್ಬೋದು. ಅದಕ್ಕೊಂದು ವ್ಯವಸ್ಥೆ ಇಲ್ವ ಹಾಗಾದ್ರೆ.

ಅಜ್ಜ – ನೋಡು, ಇದು ಕಾಣಿಸಿಕೊಂಡಿತು ಅದರ ಮೇಲೆ.

ಪರೀಕ್ಷಿತ – ಏನೇ ಆಗ್ಲಿ. ಸ್ವಯಂ ಪ್ರಕಾಶದ ಒಂದು ಇದಿಲ್ಲದೆ ಅದು ಕಾಣಿಸಿಕೊಳ್ಳೋದಾದ್ರೂ ಹೇಗೆ.

*****

ಆನಂದ ಕುಟೀರ, ಪುತ್ತೂರು 13.02.2000

ಧರ್ಮ ಎಲ್ಲಿ ಉಂಟು ಅಂತ ಹೇಳುವಾಗ ವರದಾಚಾರ್ಯರು ಏನು ಹೇಳಿದ್ರು, ಶಾಂತ.

ಶಾಂತ – "ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವಂಥ ದಾರಿಯೇ ನಿಜವಾದ ಧರ್ಮ ಉತ್ಕೃಷ್ಟವಾದ ಧರ್ಮ" ಅಂತ ಹೇಳಿದ್ರು.

ಅಜ್ಜ – ಹಾಂ. ನೋಡು ಅದು ಸರಿ. ನೋಡು. ಎಲ್ಲ ಖಾಲಿ, ಖಾಲಿ, ಖಾಲಿ ಆಕ್ತದೆ. ಆತ್ಮನನ್ನು ಕರಿತುಕೊಂಡ್ರೆ ಮತ್ತೇನು. ಇದು ಸ್ವಂತಕ್ಕಾಗಿ ಆದ್ರೆ ವಿವರಣೆ ಒಂದೂ ಅಗತ್ಯ ಇಲ್ಲ ಇಲ್ಲಿ. ಅದನ್ನು ಹೊರಗೆ ಹಾಕ್ಲಿಕ್ಕೆ. ಎಲ್ಲ ಬೇಕಾಕ್ತದೆ. ಪಿನ್ ಪಾಯಿಂಟುಗಳನ್ನು ಕೊಟ್ರೆ ಮತ್ತೆ ಬರೆಯುವವರೆ ಬರೀತಾರೆ ಇಲ್ಲಿ. ಇದೇ ಸಾಯಲು ಕಲಿಯಿರಿ ಅಂತ ಹೇಳೋದು. ಪಾಯಿಂಟುಗಳನ್ನು ಕೊಡ್ತದೆ ಮತ್ತೆ ಯಾರಾದ್ರೂ ವಿವರಿಸಬೇಕು. ಇದು ಯಾರುಗೂ ಗೊತ್ತಿಲ್ಲ. ಧರ್ಮ ಅಂದ್ರೆ ಸನಾತನ ಧರ್ಮ, ಹಿಂದೂ ಧರ್ಮ ಅಂತ ಹೇಳಿಬಿಟ್ತಾರೆ ಮುಗೀತು. ಹಾಂ. ಜಗತ್ತು ಸೃಷ್ಟಿಕಾಲದಲ್ಲಿ ಹಿಂದೂ ಧರ್ಮ ಇತ್ತಾ? ಆಗ ಸೃಷ್ಟಿಯೇ ಇರ್ಲಿಲ್ಲ. ಇನ್ನು ಹಿಂದೂ ಧರ್ಮ ಎಲ್ಲಿಂದ. ಸೃಷ್ಟಿ ಆದಮೇಲೆ ಎಲ್ಲಾ ಧರ್ಮಗಳು ಬಂತು ಅಲ್ವಾ. ಆಮೇಲೆ ಹೇಳಿದ್ರು ಇದು ಹಿಂದೂ ಧರ್ಮ, ಇದು ಆ ಧರ್ಮ, ಈ ಧರ್ಮ ಅಂತ್ಹೇಳಿ. ನಾವು ಹೀಗೆ ಹೇಳಿದ್ರೆ ಎಲ್ಲಾ ಹಿಂದೂಗಳು ವಿರೋಧಕ್ಕೆ ಬಂದಾರು. ಅಲ್ವಾ ಶಾಂತಾ. ಬಂದ್ರೆ ಬರ್ಲಿ ನಮಗೇನು. ಏನ್ಹೇಳ್ತೀ.

ಶಾಂತ – ಹೀಗೆ ವಿರೋಧಗಳು ಬಂದ್ರೆ ಅವುಗಳನ್ನು ಹೇಗೆ ದಾಟಿಕೊಂಡು ಹೋಗೋದಜ್ಜ.

ಅಜ್ಜ – ಹ್ಞಾಂ. ಈ ವಿರೋಧಗಳೆಲ್ಲ ನಿಲ್ಲಬೇಕಲ್ಲ.

ಶಾಂತ – ಎಲ್ಲರೂ ವಿರೋಧಿಸಿದ್ರೆ ಒಪ್ಪುವವರು ಯಾರು?

ಅಜ್ಜ – ಇಲ್ಲಪ್ಪ. ವಿರೋಧಗಳೊಂದೂ ನಿಲ್ಲೋದಿಲ್ಲ. ಸತ್ಯ ಅಲ್ವಾ. ನಿಲ್ಲೋದು ಅದೊಂದೆ. ಹೆದ್ರಿಬಿಟ್ರೆ ಹೋಯ್ತು. ಪಲ್ಸ್ ಎಷ್ಟಿದೆ ನೋಡು.

ಶಾಂತ – ಸರೀ ಇದೆ ಅಜ್ಜ.

ಅಜ್ಜ – ನೋಡು ಇಂಥ ವಿಷಯ ಮಾತ್ನಾಡುವಾಗ ಸರೀ ಇರ್ತದೆ. . . . ನೋಡು ಮೋಡ ಉಂಟು. ಕಪ್ಪು ಮೋಡ. ಅದು ಪರಿವರ್ತನೆ ಹೊಂದಿದಾಗ ಬಿಳೀ ಮೋಡ ಆಯ್ತು. ಬಿಳೀ ಮೋಡ ವಿಕಾಸ ಹೊಂದಿದಾಗ ಮೋಡವೇ

ಕಾಣೋದಿಲ್ಲ. ವಿಕಾಸ ಅಂದ್ರೆ ಹಾಗೆ. ಇದು ಈಗ, ನಾವು ಜನ್ಮಕ್ಕೆ ಬಂದಿದ್ದಕ್ಕೆ ಇದನ್ನು ಜಗತ್ತಿಗೆ ಎತ್ತಿ ತೋರಿಸುವಂಥಾದ್ದು.

ಶಾಂತ – ಅದು ಹೇಗೇಂತ.

ಅಜ್ಜ – ಅದು ತೋರುಸ್ತದಪ್ಪಾ ನಾವು.

ಶಾಂತ – ಇಡೀ ಜಗತ್ತಿಗೆ ಹೇಗಜ್ಜ.

ಅಜ್ಜ – ಜಗತ್ತಿಗೆ ತೋರುಸ್ತದೆ.

ಶಾಂತ – ಹೇಗೆ ಯಾವ ರೀತಿ.

ಅಜ್ಜ – ಅದು ತನ್ನಷ್ಟಕ್ಕೆ ವಿಮರ್ಶಣೆ ಬರ್ತದೆ. ಇದನ್ನು ಎತ್ತಿ ಹಾಕಿದ ಕೂಡ್ಲೆ. ಹ್ಹಷಬ್ಬ. ಅದು ಆ ಕಾಲಕ್ಕೆ . . . ಇಂಥದ್ದಕ್ಕೆಲ್ಲ ಗೋವಿಂದಾಚಾರ್ಯರು ಬೇಕು ನಮಗೆ. ಅವರು ಇದನ್ನ ವಿವರಿಸತ್ತಾರೆ. ಆಖೇರಿಗೆ. ನೋಡು . . . ತೊಳ್ಳಾಡಿಗೆ ಪವರ್ ಸಾಕಾಗೋದಿಲ್ಲ ಶಾಂತ. ತೊಳ್ಳಾಡಿಗೆ ಪವರ್ ಏನಾಯ್ತು ಅಂತ್ಹೇಳಿ. ಆ್ಞಂ. ಭಾಷಣ ಕೊಡ್ತಾರೆ ಸರಿ. ಆದ್ರೆ ಪವರ್ ಕಾಣೋದಿಲ್ಲ. ಶುರುವಿಗಿತ್ತು ಸ್ವಲ್ಪ. ಅದನ್ನು ಸ್ವಲ್ಪ ಇದು ಮಾಡಿಬಿಟ್ರು.

ಶಾಂತ – ಕಳಕೊಂಡುಬಿಟ್ರಾ.

ಅಜ್ಜ – ಹೌದು. ದೋಸೆ ತಿನ್ನಬೇಕೋ ಬ್ಯಾಡ್ವೋ ಅಂತ್ಹೇಳಿ.

ಶಾಂತ – ಎರಡು ತಿನ್ನಿ.

ಅಜ್ಜ – ಆಯ್ತು.

*****

ಆನಂದ ಕುಟೀರ, ಪುತ್ತೂರು 15.02.2000

ಮಹಾತ್ಮಾ ಗಾಂಧಿಯ ಮಾತುಗಳು ಕೃತಿಗೆ ಸಂಬಂಧಪಟ್ಟದ್ದು. ಅವನ ಮಾತುಗಳು ಏನುಂಟು, ಅದು ಜಗತ್ತಿಗೆ ಅವನಿಗೆ ಸಂಬಂಧಪಟ್ಟ ಮಾತುಗಳು. ಮೊದಲು ತಾನು ಬಿಡುಗಡೆ ಹೊಂಡುವಂಥಾದ್ದು. ಆಮೇಲೆ ಜಗತ್ತಿಗೆ ದಾರಿ ತೋರಿಸುವಂಥಾದ್ದು. ತಾನು ಬಿಡುಗಡೆ ಹೊಂದದೆ ಜಗತ್ತಿಗೆ ದಾರಿ ತೋರಿಸ್ಲಿಕ್ಕೆ ಸಾಧ್ಯವಿಲ್ಲ. ಆ್ಞಂ. ಇಲ್ಲವಾದ್ರೆ ಭಾಷಣವೇ, ಪ್ರವಚನವೇ ಆಯ್ತು. ಅದು ಎಷ್ಟೋ ಮಾಡ್ಬಹುದು. ಪ್ರಯೋಜನ ಉಂಟಾ? ಇಲ್ಲ. ಮೊದ್ಲು ತಾನಾಗ್ಬೇಕು ಒಳಗೆ. ಅದನ್ನು ಅವ್ಯಕ್ತದಿಂದ, ವ್ಯಕ್ತದಿಂದ ಕೊಡುವಂಥಾದ್ದು. ಶಬ್ದಗಳಿಂದ ಹೇಳ್ಳಿಕ್ಕೆ ಬರೋದಿಲ್ಲ. ಶಬ್ದಗಳಿಂದ ಹೇಳೋದಾದ್ರೆ ನೂರಾರು ಜನ ಇದ್ದಾರೆ.

ಶಾಂತ – ನಿಮ್ಮ ಅನುಭವವನ್ನು ಹೇಳಿ.

ಅಜ್ಜ – ಹೇಳಿ ಅಂದ್ರೆ ಹೇಳ್ಳಿಕ್ಕೆ ಬರ್ತದಾ. ಅದು ಬರ್ಬೇಕು ತನ್ನಷ್ಟಕ್ಕೆ.

ಶಾಂತ – ಆಗ ಯಾವ ರೀತಿಯಾದ ವಿಚಾರಗಳು ಬಂದದ್ದು.

ಅಜ್ಜ – ಆಗ ಮನಸ್ಸನ್ನು ಕೇಂದ್ರೀಕರಿಸಿದ್ದು ಒಂದೆ, ಪರಮಾತ್ಮನಲ್ಲಿ ಬೇರೆ ಏನೂ ಇಲ್ಲ.

ಶಾಂತ – ಆಗ ಪರಮಾತ್ಮ ಅಂದ್ರೆ ಏನು ಅಂತ ಇತ್ತು. ಆ ಸಮಯದಲ್ಲಿ.

ಅಜ್ಜ – ಇದನ್ನು ಬಿಟ್ಟು ಹೊರಗೆ ಅಂತ್ಹೇಳಿ ಇರ್ಲಿಲ್ಲ.

ಶಾಂತ – ಮತ್ತೆ ಹೇಗೆ ಕೇಂದ್ರೀಕರಿಸಿದ್ರಿ.

ಅಜ್ಜ – ಒಟ್ಟಾರೆ ಹೇಗೆ ಹೇಳೋದು. ಅದು ಪ್ರವಚನವಾ ಹೇಳ್ಳಿಕ್ಕೆ. ಅದರ ವರ್ಣನೆ ಹೇಳ್ಬೋದು ಪರಮಾತ್ಮ ಹೀಗೆ ಅಂತ ಎಲ್ಲ ಸರಿ. ಆದ್ರೆ . . . . . ಅಲ್ವಾ.

ಶಾಂತ – ಆಗ ಏನಾಯ್ತು.

ಅಜ್ಜ – ಏನಾಯ್ತು ಅಂತ ಹೇಳ್ಳಿಕ್ಕಾಗೋದಿಲ್ಲ. ಎಲ್ಲ ಇನ್ನೊಬ್ಬ ಕಂಡು ಹಿಡಿದು ವರ್ಣನೆ ಕೊಡ್ಬೋದು ಅಷ್ಟೆ. ಈಗ ನಾವು ಇದನ್ನ ಹೇಳಿದ್ರೆ . . . ಇನ್ನೊಬ್ಬ ಕಂಡು ಹಿಡಿದು ಕೊಡ್ಬಹುದು ಅಷ್ಟೆ. ನಮ್ಮ ವಿಚಾರ ಹಾಗೆ ಉಂಟು. ಎಲ್ಲ ಜೀವನದಲ್ಲಿ ಆದ ಕಥೆ ಅಲ್ವಾ. ಇದನ್ನು ಇನ್ನೊಬ್ಬ ಕಂಡು ಹಿಡೀಬೇಕು. ಕಂಡು ಹಿಡಿಯೋದು ಅಂದ್ರೆ . . . ನಾವು ಈಗ ದಾರಿ ತೋರಿಸುವಂಥದ್ದು. ಘಟನೆಯನ್ನಲ್ಲ. ಘಟನೆಯೆಲ್ಲ ಬರೆದು ಆಗಿದೆ. ಈಗ ಅದನ್ನೇ . . . . ಹೀಗುಂಟು.

*****

ಆನಂದ ಕುಟೀರ, ಪುತ್ತೂರು 17.02.2000

ಅಜ್ಜ – ಹಿಂದಿನ ಜನ್ಮದ್ದು ಹೇಳುವಂಥಾದ್ದು, ಇನ್ನೊಬ್ಬರ ಮನಸ್ಸು ನೋಡಿ ಹೇಳುವಂಥದ್ದು, ಪವಾಡಗಳು, ಅದು, ಇದು ಎಲ್ಲ ಉಂಟಲ್ಲಾ, ಇದೆಲ್ಲ ಆಧ್ಯಾತ್ಮಿಕಕ್ಕೆ ಹೊಂದಾಣಿಕೆ ಬರೋದಿಲ್ಲ. ಭವಿಷ್ಯತ್ ಹೇಳುವಂಥಾದ್ದು, ಭೂತಕಾಲದ ವಿಚಾರಗಳನ್ನು ಹೇಳುವಂಥಾದ್ದು, ಒಂದೂ ಊಹೂಂ . . . ಇದೆಲ್ಲ ಮನಸ್ಸಿಗೆ ಸಂಬಂಧಪಡ್ತದೆ. ಮನಸ್ಸು ವಿಕಾಸವಾಗುವಾಗ ಮತ್ತಲ್ಲಿ ನೋಡಿ ಏನುಂಟು. ಎಲ್ಲ ನಾಶ ಆಗಿ ಹೋಕ್ತದೆ. ಉಳಿಯುವಂಥಾದ್ದು ಆತ್ಮ ಒಂದೆ. ಬಾಕಿ ಎಲ್ಲ ಹೋಯ್ತು. ಅವ ಇರ್ತಾನೆ ಎಲ್ರ ಹಾಗೆ ಊಟ ತಿಂಡಿ ಎಲ್ಲ ಉಂಟು. ಆದ್ರೆ ಅವ ಖಾಲಿ.

ಪರೀಕ್ಷಿತ – ಯಾರು? ಖಾಲಿ ಯಾರು?

ಅಜ್ಜ – ಇಲ್ಲಿ ಈ ಪ್ರಪಂಚಕ್ಕೆ ಬೇಕಾಗಿ ಶಬ್ದಗಳನ್ನು ಉಪಯೋಗಿಸುವಂಥಾದ್ದು. ಇಲ್ಲದಿದ್ರೆ ಅದೂ ಕೂಡ ಇಲ್ಲ. ಮನಸ್ಸು ಖಾಲಿ. ಆತ್ಮ ಅಂದ್ರೆ ಬೆಳಕು ಒಂದೇ ಇರುವಂಥಾದ್ದು. ಆವರಣಗಳೆಲ್ಲ ಹೋಯ್ತು. ಸ್ಥೂಲ ದೇಹ ಉಂಟು. ಅದರಲ್ಲಿದ್ದ ಸೂಕ್ಷ್ಮ ದೇಹ, ಕಾರಣದೇಹ ಎಲ್ಲ ನಾಶ ಆಯ್ತು. ಅಲ್ಲಿ ಯಾವ ಭಾವನೆಗಳೂ ಇಲ್ಲ ಅಲ್ವಾ. ಹಾಗಾದ್ರೆ ಆದೀತು. ಒಂದು ಭಾವನೆ ಉಂಟು ಅಂತ್ಹೇಳಿ ಆದ್ರೆ ಹೋಯ್ತು. ಆ್ಞಂ. ಭಾವನೆಯೇ ಇಲ್ಲ. ಹಿಂದೆ ಇಂಥಾ ದೇಹದಲ್ಲಿದ್ದ ಅಂತ್ಹೇಳಿ ಆತ್ಮ ಹೇಳ್ತಾನಾ. ಆತ್ಮನಿಗೆ ಜನ್ಮವೇ ಇಲ್ಲ. ಇನ್ನು ಸರಿಯಾಗಿ ಉತ್ತರ ಕೊಡೋದಿದ್ರೆ – ನಾನು ಅಂದ್ರೆ ಆತ್ಮ. ನನಗೆ ಜನ್ಮವೇ ಇಲ್ಲ. ಮುಗೀತಲ್ಲ. ಹಿಂದಿನ ಜನ್ಮ ಬಿಡು. ಜನ್ಮವೇ ಇಲ್ಲ. ಅಲ್ಲಿಗೆ ಬಂದಮೇಲೆ ಹೀಗುಂಟು. ಆತ್ಮನಿಗೆ ಒಂದು ಆವರಣ, ಇದೇ ಅಂತ ಹೇಳುವ ಕಾರಣ, ಈ ಜನ್ಮಗಳು ಆವರಣಕ್ಕೆ ಅನ್ವಯಿಸ್ತದೆ. ಅದುವೇ ಅಂದ್ರೆ ಆವರಣವೇ ಇಲ್ಲ ಅಂತ ಆದ್ರೆ, ಮತ್ತೆ ಯಾರಿಗೆ ಜನ್ಮ? ಮಾತಾಡ್ಲಿ ಇಲ್ಲಿ. ನಾಡಿದ್ದು ಬನ್ನಂಜೆ ಅವ್ರೊಟ್ಟಿಗೆ ಮಾತ್ನಾಡ್ಲಿಕ್ಕುಂಟು. ಅಂಥ ಸನ್ನಿವೇಶ ಬಂದಾಗ, ಇಲ್ಲಾದ್ರೆ ಇಲ್ಲ.

ಪರೀಕ್ಷಿತ – ಮೊಟ್ಟ ಮೊದಲಿನ ಜನ್ಮ ಹೇಗಾಯ್ತಜ್ಜ.

ಅಜ್ಜ – ಅದಕ್ಕೆಲ್ಲ ಉತ್ತರವೇ ಇಲ್ಲ ಅಂತ ಕಾಣ್ತದೆ. ಬಹಳ ಗೂಢ . . . . .

ಪರೀಕ್ಷಿತ – ಬಹಳ ಗೂಢವಾದ ಸಂಗತಿ. ಅದಕ್ಕೆ ಉತ್ತರ ಕೊಡ್ಬೇಕಜ್ಜ . . . ಸಮಾಧಾನಕರವಾದ ಉತ್ತರ ಕೊಡ್ಬೇಕಜ್ಜ.

ಅಜ್ಜ – ಉತ್ತರ ಕೊಟ್ರೆ ನಿಮಗೆ ಅರ್ಥ ಆಗ್ಬೇಕಲ್ಲಪ್ಪಾ. ನಾವು ಕೊಡ್ತದೆ. ಹೌದು. ನಾವು ಎಂಥದು ಕೊಟ್ರೂ, ಏನು ಕೊಟ್ರೂ ಅವ ತೆಕ್ಕೊಳ್ಳುವವ ಎಷ್ಟು ವಿದ್ವಾಂಸನಾಗಿದ್ರೂ ಪ್ರಯೋಜನವಿಲ್ಲ. ಅವನು ಹಾಗೆ ಆದಾಗ ಮಾತ್ರ ಇದು ಅವನಿಗೆ ಅರ್ಥ ಆಗ್ತೋದು. ಇಲ್ಲವಾದ್ರೆ ನಾವು ಎಂಥದು ಹೇಳೋದು. ನಾವು ಹೇಳ್ತದೆ ಇಲ್ಲಿ. ಸ್ವಯಂ ಪ್ರಕಾಶ ಉಂಟಲ್ಲ. ಆ ಸ್ವಯಂ ಪ್ರಕಾಶದಿಂದ ಸ್ವತಃ ಉಂಟಾದವನು ನಾನು ಅಂತ ಇಲ್ಲಿ ಹೇಳ್ತದೆ ಅನುಭವವನ್ನು. ಇದಕ್ಕೆ ಇನ್ನೊಬ್ಬ ಏನು ಹೇಳಿಯಾನು. ಛೆ . . . ಇವನ್ನು ಅರ್ಥ ಮಾಡೋದು ಹೇಗೆ. ನೀನು ಹಾಗೆ ಆದಾಗ ನಿನಗೆ ಅರ್ಥ ಆಗ್ತೋದು. ಅಷ್ಟರವರೆಗೆ ಅರ್ಥ ಆಗ್ಲಿಕ್ಕಿಲ್ಲ. ನೀನೂ ಅಂತ್ಹೇಳಿ ಅಲ್ಲ, ಯಾರೇ ಆಗ್ಲಿ.

ಪರೀಕ್ಷಿತ – ಹ. ಹ. ಹ. ಈ ಸ್ವಯಂ ಪ್ರಕಾಶ ಒಂದುಂಟು. ಆದರಿಂದ ಒಂದು ಉಂಟಾಗುವುದು ಅಂದ್ರೆ ಏನು?

ಅಜ್ಜ – ಅಂದ್ರೆ.

ಪರೀಕ್ಷಿತ – ಈಗ ಸ್ವಯಂ ಪ್ರಕಾಶದಿಂದ ಒಂದು ಸ್ವತಃ ಉಂಟಾಗುವುದು ಅಂದ್ರೆ ಏನೂಂತ.

ಅಜ್ಜ – ಇನ್ನು ಹೇಳೋದಾದ್ರೆ ಒಂದು ಕಾಣಿಸಿಕೊಂಡಿತು. ಅದುವೇ ಮಾಯೆ.

ಪರೀಕ್ಷಿತ – ಸ್ವತಃ ಉಂಟಾಗುವುದು ಅಂದ್ರೆ ಏನು.

ಅಜ್ಜ – ಅದನ್ನೇ ಜಗತ್ತು ಪರಮಾತ್ಮ ಅಂತ ಹೇಳುವಂಥಾದ್ದು. ಆ ಉಂಟಾದದ್ದು.

ಪರೀಕ್ಷಿತ – ಸ್ವತಃ ಉಂಟಾಗುವುದು ಹೇಗೇಂತ.

ಅಜ್ಜ – ಹೌದು ಸ್ವತಃ ಕಾಣಿಸಿಕೊಂಡಿತು. ಅದಕ್ಕೆ ತಂದೆ ತಾಯಿಯ ಗರ್ಭ, ಅದು, ಇದು, ಏನೂ ಇಲ್ಲ. ಸ್ವತಃ ಕಾಣಿಸಿಕೊಂಡಿತು. ಅದುವೇ ಮೂಲ ಪ್ರಕೃತಿ. ಅದು ಸಾಧ್ಯ ಉಂಟು.

ಪರೀಕ್ಷಿತ – ಈಗ ಸ್ವಯಂ ಪ್ರಕಾಶದಿಂದ ಒಂದು ಪರಿಣಾಮವೇ ಇಲ್ಲದೆ ಕಾಣಿಸಿಕೊಂಡದ್ದಾ ಅದು.

ಅಜ್ಜ – ಅಂದ್ರೆ.

ಪರೀಕ್ಷಿತ – ಸ್ವಯಂ ಪ್ರಕಾಶಕ್ಕೂ, ಆ ಕಾಣಿಸಿಕೊಳ್ಳೂವ ಕ್ರಿಯೆಗೂ ಯಾವ ಸಂಬಂಧ ಉಂಟು. ಇಲ್ವಾ. ಕಿಂಚಿತ್ ಸಂಬಂಧವೂ ಇಲ್ವಾ.

ಅಜ್ಜ – ಇಲ್ಲ. ಇಲ್ಲವೇ ಇಲ್ಲ. ಕಲ್ಪಿಸಿಕೊಳ್ಳಬಹುದಷ್ಟೆ. ಸಂಬಂಧ ಇಲ್ಲ.

ಪರೀಕ್ಷಿತ – ಸ್ವಯಂ ಪ್ರಕಾಶದಿಂದ ಸ್ವತಃ ಒಂದು ಕಾಣಿಸಿಕೊಂಡಿದ್ದು ಅಂತ ತಿಳಿದದ್ದು ಯಾರಿಗೆ?

ಅಜ್ಜ – ಈ ಸುಪ್ತ ಪ್ರಜ್ಞೆಗೆ. ಈ ಸುಪ್ತ ಪ್ರಜ್ಞೆ ಜಾಗೃತವಾದಾಗ ಅವೆಲ್ಲ ತಿಳಿದು ಬರ್ತದೆ.

ಪರೀಕ್ಷಿತ – ಇಲ್ಲಿ ಸುಪ್ತ ಪ್ರಜ್ಞೆ ಅನ್ನುವಂಥಾದ್ದು ಒಂದು ಯಂತ್ರ ಅಲ್ವಾ. ಆ ಯಂತ್ರಕ್ಕೆ ತಿಳಿಯುವುದು ಹೇಗೆ? ಆ ಯಂತ್ರದ ಮೂಲಕ ತಿಳಿಯುವವನು ಒಬ್ಬ ಬೇಕಲ್ಲ. ಅದು ಯಾವುದು? ಅಲ್ವಾ. ಸ್ವತಂತ್ರವಾಗಿ ತಿಳಿಯಲಿಕ್ಕೆ ಸಾಧ್ಯ ಉಂಟಾ. ಇಲ್ಲಿ. ಯಾಕೇಂದ್ರೆ ಈಗ ಒಂದು ಹೆಣದಲ್ಲೂ ಸುಪ್ತ ಪ್ರಜ್ಞೆ ಉಂಟು. ಅದನ್ನು ಉಪಯೋಗಿಸಿ ತಿಳಿಯುವಂಥಾ ಸಂಗತಿ ಅಲ್ಲಿಲ್ಲ. ಅಲ್ವಾ. ಈಗ ಹೆಣದಲ್ಲಿ ಮನಸ್ಸಿಲ್ವಾ?

ಅಜ್ಜ – ಹೆಣದಲ್ಲಿ ಎಂಥ ಮನಸ್ಸು. ಮನಸ್ಸುಂಟಾ ಹೆಣದಲ್ಲಿ.

ಪರೀಕ್ಷಿತ – ಹೆಣದಲ್ಲಿ ಮೆದುಳುಂಟಲ್ವಾ.

ಅಜ್ಜ – ಹ. ಆ ಮೆದುಳು ನಿಷ್ಕ್ರಿಯೆ ಆಯ್ತಲ್ವಾ.

ಪರೀಕ್ಷಿತ – ಹೌದಜ್ಜ. ಮೆದುಳು ಕೆಲಸ ಮಾಡೋದು ಯಾವುದರಿಂದ.

ಅಜ್ಜ – ಹೊಂದಾಣಿಕೆ ಬರಲ್ಲಪ್ಪ.

ಪರೀಕ್ಷಿತ – ನಮಗೆ ವಿಷಯಗಳು ಗೊತ್ತಾಗೋದ್ಹೇಗಜ್ಜ.

ಅಜ್ಜ – ಗೊತ್ತಾಗ್ಬೇಕಾದ್ರೆ ನೀವು ಅದಕ್ಕೆ ಇಳೀಬೇಕು. ವಿವರ ಕೊಡ್ಲಿಕ್ಕಾಗೋದಿಲ್ಲ.

ಪರೀಕ್ಷಿತ – ವಿವರ ಕೊಡ್ಲಿಕ್ಕಾಗಿದ್ರೆ ಭಾರೀ ಒಳ್ಳೇದಿತ್ತು.

ಅಜ್ಜ – ನೀವು ಅದನ್ನು ಕೃತಿಯ ರೂಪದಲ್ಲಿ ತರಬೇಕು. ಹಾಗಿದ್ರೆ ಮಾತ್ರ . . . .

ಪರೀಕ್ಷಿತ – ಅದನ್ನು ತರ್ಲಿಕ್ಕೆ ನಮಗೆ ಈ ಜನ್ಮದಲ್ಲಿ ಸಾಧ್ಯ ಇಲ್ಲ ಅಜ್ಜ. ಅದು ಗ್ಯಾರಂಟಿ. ನಾವು ಕೃತಿಯ ರೂಪದಲ್ಲಿಳಿಲಿಕ್ಕೆ ಸಾಧ್ಯ ಇಲ್ಲ. ಹೀಗೆ ನೋಡುವ ಅಂತ್ಹೇಳಿ ಅಷ್ಟೆ.

ಸ್ವತಃ ಕಾಣಿಸಿಕೊಳ್ಳುವುದು ಹೇಗೆ ಅಂತ್ಹೇಳಿ.

ಅಜ್ಜ – ನೋಡು ಶಾಂತ, ಸ್ವಲ್ಪ ಹೇಳಪ್ಪ.

ಪರೀಕ್ಷಿತ – ಒಂದು ಸಂಗತಿ ಸ್ವತಃ ಕಾಣಿಸಿಕೊಳ್ಳುವುದು ಹೇಗೆ? ಮತ್ತೆ ಅದು ಕಾಣಿಸಿಕೊಂಡಿತು ಅಂತ ತಿಳಿದದ್ದು ಯಾರಿಗೆ? ಎರಡು ಸಂಗತಿಯನ್ನು ದಯವಿಟ್ಟು ಕ್ಲಿಯರ್ ಮಾಡ್ಬೇಕು. ನೀವು ನನಗೆ. ಒಟ್ಟಾರೆ ಇಲ್ಲದ್ರೆ ತಲೆ ಬಿಸಿ ಆಕ್ತದೆ ನನಗೆ ಹ. ಹ. ಹ. ಇಷ್ಟು ಅರ್ಥ ಆಗ್ಲಿಲ್ವಾ ಅಂದ್ರೆ ಎಂಥದಪ್ಪ ಇದು. ಜನಗಳಿಗೆ ಏನು ಸಂಗತಿ ಅಂತ ಗೊತ್ತಿಲ್ಲ. ಒಟ್ಟು ಗೊಂದಲ ಆಗಿ ಬಿಟ್ಟಿದೆ. ಯಾಕೇಂದ್ರೆ ಒಬ್ಬೊಬ್ರು ಒಂದೊಂದು ನಮೂನೆ ಹೇಳ್ತಾರೆ. ಅದನ್ನು ಒಂದು ಸರಿಯಾಗಿ ಸಮರ್ಪಕವಾಗಿ ವಿವರಿಸಿ, ವೈಚಾರಿಕವಾಗಿ ವಿವರಿಸಬೇಕು. ಕೃತಿಗೆ ಇಳಿಬೇಕು ಅಂತ್ಹೇಳಿ ದಯವಿಟ್ಟು ಹೇಳ್ಬೇಡಿ. ಹ. ಹ. ಹ.

ಅಜ್ಜ – ಮಾತುಗಳು ಬರ್ತದೆ. ಆದರೆ . . . . .

ಪರೀಕ್ಷಿತ – ಸರ್ವ ವ್ಯಾಪಿಯಾಗಿರ್ತಕ್ಕ ಭಗವಂತನಿಂದ ಚತುರ್ಮುಖ ಬ್ರಹ್ಮನು ಮೊತ್ತ ಮೊದಲಿಗೆ ಉಂಟಾದನು. ಇದು ಅದ್ರಲ್ಲುಂಟು. ನಾನು ಮೊನ್ನೆಯಿಂದ ಆಲೋಚಿಸ್ತೇನೆ. ನೀವು ಹೇಳತಕ್ಕ ಪರಮಾತ್ಮನೇ, ಮಧ್ವಾಚಾರ್ಯರು ಹೇಳುವ ಭಗವಂತನೋ ಅಂತ ನನ್ನ ಪ್ರಶ್ನೆ. ಇದಕ್ಕೆ ಅನೇಕ ಸಾಕ್ಷಿಗಳು ನನ್ನ ಹತ್ರ ಉಂಟೀಗ. ಯಾಕೇಂದ್ರೆ ಈ ತನಕ ಯಾರು ಪರಮಾತ್ಮನು ಉಂಟಾದದ್ದು ಅಂತ ಹೇಳ್ಳಿಲ್ಲ. ಪರಮಾತ್ಮನು ಉಂಟಾದದ್ದಲ್ಲ. ನಿಮ್ಮ ಸಿದ್ಧಾಂತದಲ್ಲಿ ಅದು ಅಂದ್ರೆ ಪರಮಾತ್ಮನು ಸ್ವಯಂ ಪ್ರಕಾಶದಿಂದ ಸ್ವತಃ ಉಂಟಾದವನು. ಅಲ್ವಾ.

ಅಜ್ಜ – ಹೌದು ಅದನ್ನೇ ಪರಮಾತ್ಮ ಅಂತ ಹೇಳ್ತದೆ. ಇಲ್ಲಿ ಉಂಟಾಗದೇ ಇರುವಂಥಾದ್ಯಾವ್ದು ಸ್ವಯಂ ಪ್ರಕಾಶ ಅಂದ್ರೆ ಆತ್ಮ. ಅದು ಉಂಟಾಗಲಿಲ್ಲ. ಅದು ಇದ್ದದ್ದು. ಅದರಿಂದ ಇದು ಉಂಟಾಯಿತು. ಯಾವ್ದು? ಈ ಮೂಲ ಶಕ್ತಿ ಉಂಟಾಯಿತು. ಅದನ್ನೇ ಜಗತ್ತು ಸೃಷ್ಟಿಕರ್ತ ಅಂತ ಪ್ರಪಂಚದಲ್ಲಿ ಹೇಳ್ತಾರೆ.

ಪರೀಕ್ಷಿತ – ಈ ಮೂಲ ಶಕ್ತಿಯೇ ಸೃಷ್ಟಿಕರ್ತ. ಹೌದು. ಅದು ಈ ಪ್ರಪಂಚವನ್ನು ಸೃಷ್ಟಿಮಾಡಿತು. ಇದು ಈ ಮೂಲ ಶಕ್ತಿಯೆ ಸ್ವಯಂ ಪ್ರಕಾಶದಿಂದ ಸ್ವತಃ ಉಂಟಾದ ಶಕ್ತಿ. ವಿಶ್ವದ ಸೃಷ್ಟಿಕರ್ತ.

ಅಜ್ಜ – ಹೌದು.

ಪರೀಕ್ಷಿತ – ಇದುವೆ ಇಡೀ ವಿಶ್ವದ ಸೃಷ್ಟಿಕರ್ತ ಚತುರ್ಮುಖ ಬ್ರಹ್ಮ.

ಅಜ್ಜ – ಉಮ್ಮ ಅದೆಲ್ಲ ಹೆಸರು ನಮಗೆ ಗೊತ್ತಿಲ್ಲ.

ಪರೀಕ್ಷಿತ – ವಿಷಯ ಇಷ್ಟು. ಜಗತ್ತಿನ ಸೃಷ್ಟಿಕರ್ತ ಚತುರ್ಮುಖ ಬ್ರಹ್ಮ. ಅಂದ್ರೆ ಮೂಲ ಶಕ್ತಿ ಅಥವ ಮಾಯ. ಈ ಚತುರ್ಮುಖ ಇದನ್ನು ಅಂದ್ರೆ ಈ ಮಾಯೆಯನ್ನು ಉಂಟು ಮಾಡಿದನು. ಪರಮಾತ್ಮ ಅಂದರೆ ಆತ್ಮ ಅಥವ ಸ್ವಯಂ ಪ್ರಕಾಶ ಅಂತ ಆಕ್ತದೆ. ಹೀಗೆ ಆದ್ರೆ ಸರೀಟ ಬರ್ತದೆ.

ಅಜ್ಜ – ಆತ್ಮನು ಮಾಯೆಯನ್ನು ಉಂಟು ಮಾಡಿದ್ದಲ್ಲ. ಆತ್ಮನಲ್ಲಿ ಮಾಯೆಯು ಕಾಣಿಸಿಕೊಂಡದ್ದು.

16.02.2000

ಅವರು ೨೯ನೇ ತಾರೀಖಿನ ದಿವಸ ಹೇಳಿದ್ದನ್ನ ತೆಗೀತದೆ. ಅವರೇ ಹೇಳಿದ ಮಾತನ್ನು ತೆಗೆದು ನಾವು ಅವರಿಗೆ ಉತ್ತರಿಸಿದ್ದಷ್ಟೆ. ನಮಗೆ ಹೇಗೆ ಗೊತ್ತಾಯ್ತು ಅಂಬ ಪ್ರಶ್ನೆಗೆ ಎಡೆಯೇ ಇಲ್ಲ ಅಲ್ಲಿ.

ಪರೀಕ್ಷಿತ – ಅದನ್ನೊಂದು ಸ್ವಲ್ಪ ವಿವರಿಸಬೇಕಜ್ಜ. ಇಗೊಳ್ಳಿ ಗಾಂಧಿಯ ರಾಜಘಾಟ್ ಸಮಾಧಿಯಲ್ಲಿ ಶ್ರೀ ಕೃಷ್ಣನ ಪ್ರತಿಮೆಯನ್ನಿಟ್ಟು, ಅದಕ್ಕೆ ಯಮುನಾ ನದಿಯ ನೀರಿನಿಂದ ಅಭಿಷೇಕ ಮಾಡಿದರೆ, ಅದು ಜಗತ್ತಿನ ಶಾಂತಿಗೆ ಪರಿಣಾಮ ಆಗುವುದು ಹೇಗೆ ಅಂತ ವಿವರಿಸ್ಬೇಕು.

ಅಜ್ಜ – ಕೊಡ್ತದೆ, ಕೊಡ್ತದೆ.

ಪರೀಕ್ಷಿತ – ದಯವಿಟ್ಟು ವಿವರಿಸಿ ಏನೋ ಇರ್ಬೇಕು ಅದ್ರಲ್ಲಿ ರಹಸ್ಯ. ಏನೋ ಸಂಗತಿ ಇರ್ತದೆ. ಏಕೇಂದ್ರೆ ಮೇಲಿಂದ ಮೇಲೆ ನೋಡುವವನಿಗೆ ಒಂದಕ್ಕೊಂದು ಸಂಬಂಧವೇ ಕಾಣುವುದಿಲ್ಲ.

ಅಜ್ಜ – ನೋಡುವ. ಅಂಥ ಸನ್ನಿವೇಶ ಬರ್ಲಿ ಹೇಳ್ತದೆ. ಅದಕ್ಕೆ ಸಂಬಂಧಪಟ್ಟ ಜನಗಳು ಬಂದಾಗ ವಿವರಗಳು ಬರ್ಬಹುದು. ಅಂತೇ ನಾವಿಲ್ಲಿ ಮಾತಾಡಿತು ಅಂತ್ಹೇಳಿ ಆದ್ರೆ ಮಾತಿನಲ್ಲೇ ಹಾರಿ ಹೋಯಿತು. ಅದಾಯ್ತು. ನಾಳೆಗೆ ಇಲ್ಲ ಆ ಮಾತುಗಳು. ಅಂಥಾ ಸನ್ನಿವೇಶ ಬರ್ಲಿ. ಅದಕ್ಕೆ ನಾವು ಹೇಳಿದ್ದಲ್ಲಿ.

ಪರೀಕ್ಷಿತ – ಅದೇ ಯಮುನಾ ನದಿಯ ನೀರನ್ನು ಹಾಕಿದ್ರೆ, ಈ ಪ್ರಧಾನಿಯೇ ಅಥವ ಯಾರೇ ಹಾಕ್ಲಿ. ಅದು ಜಗತ್ತಿನ ಶಾಂತಿಯಲ್ಲಿ ಅದರ ಪರಿಣಾಮ ಏನು ಅಂತ್ಹೇಳಿ.

ಅಜ್ಜ – ಹ್ಯಾಗೇ ಅಂತ ಕೇಳಿದ್ರೆ, ಪುಸ್ತಕ ನೋಡ್ಬೇಕಷ್ಟೆ. ಇನ್ನು. ಅದರಲ್ಲಿ ಇರೋದು ಓದಿ ಹೇಳ್ಬೇಕು.

ಪರೀಕ್ಷಿತ – ಇಲ್ಲ. ಅದ್ರಲ್ಲಿ ಅಂತರ್ವಾಣಿಯಲ್ಲಿ ಅಷ್ಟೇ ಇರೋದು. ಅಂತರ್ವಾಣಿಯಲ್ಲಿ ಹೀಗೆ ಆಗ್ಬೇಕು ಅಂತ್ಹೇಳಿ ಉಂಟು.

ಅಜ್ಜ – ಹೌದು.

ಪರೀಕ್ಷಿತ – ಹೇಗೆ ಅಂತ್ಹೇಳಿ ಒಬ್ಬ ಕೇಳಿದ್ರೆ. ದಯವಿಟ್ಟು ವಿವರಿಸಿ.

ಅಜ್ಜ – ಹಾಗೆ ಕೇಳಿದಾಗ ಅಲ್ಲಿ ಉತ್ತರ ಬರ್ತದೆ. ಅಲ್ಲಿ ಬರ್ತದೆ.

ಒಬ್ಬರು – ಈಗ ಕೇಳ್ತೇನೆ ನಾನು . . .

ಅಜ್ಜ – ಈಗ ಕೇಳಿದ್ರೆ ನೀವು ಅಲ್ಲಿ ಹೋಗಿ ಹೇಳ್ಲಿಕ್ಕೆ ತಯಾರಿದ್ದೀರಾ. ಅದೆಲ್ಲ ಆಗೋದಿಲ್ಲ.

ಪರೀಕ್ಷಿತ – ಅಲ್ಲಾ ಇದು ನಮ್ಮ ವೈಯುಕ್ತಿಕವಾಗಿ ಕೇಳುವಂಥಾದ್ದು.

ಅಜ್ಜ – ವ್ಯಕ್ತಿಗತವಾಗಿ ಇದು ಸಿಕ್ಕೋದಿಲ್ಲ. ಸಿಕ್ತದೆ ಅಂಥಾ ಸನ್ನಿವೇಶ ಬಂದಾಗ. ಬರ್ಲಿ ಅಪ್ಪಾ ನೋಡುವ. ನಾವಿದ್ದೇವಲ್ಲ ಅವಾಗ. ಆ್ಞಂ.

ಪರೀಕ್ಷಿತ – ಯಾಕೆ ಅಜ್ಜ, ಒಂದು ಸಲ ವಿವರಿಸಿದ್ರೆ ಏನಾಕ್ತದೆ.

ಅಜ್ಜ – ವಿವರಣೆ ಎಷ್ಟೋ ಸರ್ತಿ ಆಗಿದೆ. ವಿವರಿಸಿದ್ರೆ ನೀವು ಹೋಗ್ಲಿಕ್ಕೆ ತಯಾರಿದ್ದೇವೋ ಅಂತ. ನಾವು ಮೊನ್ನೆ ಹೇಳಿ ಆಯ್ತು. ಅಂಥಾ ಅನುಭವಿಗಳು ಸಿಕ್ತಾರೆ ಮುಂದೆ. ಅವಾಗ ನೋಡುವ ನಾವು. ಕಾದು ನೋಡುವ.

ಪರೀಕ್ಷಿತ – ನಮಗೆ ನೀವು ಸಾಕೀಗ. ಇನ್ನು ಎಷ್ಟು ಜನ ಬಂದ್ರೂ ನೀವು ಸಾಕೀಗ.

ಅಜ್ಜ – ಎಲ್ಲಾ ಸ್ವಲ್ಪ ಸಮಯ ಕಳೆಯಲಿ.

ಪರೀಕ್ಷಿತ – ಅಜ್ಜನ ಸ್ಪೆಷಲ್ ಎಂಥದು ಗೊತ್ತಾ ಎಲ್ಲಾ ಮುಂದು ಹಾಕುವುದು.

ಅಜ್ಜ – ಮುಂದೆ ಹಾಕುವುದಲ್ಲಪ್ಪಾ. ಹೇಳಿದ್ರೆ ಭಾಗವಹಿಸ್ಲಿಕ್ಕೆ ತಯಾರಿದ್ದೀರಾ ಪರೀಕ್ಷಿತಾ. ಸುಮ್ಮನೆ ಮಾತಾಡಿದ್ರೆ ಈ ಮಾತುಗಳು ಸುಮ್ಮನೆ ಹಾಳಾಕ್ತದೇ ಹೊರ್ತು, ಈಗ ಏನೂ ಪ್ರಯೋಜನ ಇಲ್ಲ. ಹಾಗೆ ಅದಕ್ಕೋಸ್ಕರ.

ಪರೀಕ್ಷಿತ – ಹೌದು ನೂರಕ್ಕೆ ನೂರು ಸರಿ. ನಮ್ಮ ಯೋಗ್ಯತೆಯೇ ಅಷ್ಟು.

ಅಜ್ಜ – ಹೇಳ್ಳಿಕ್ಕೆ ಬಹಳ ಕಷ್ಟ ಆಕ್ತದಪ್ಪಾ. ಬರೋದಿಲ್ಲ. ಅದು ಒಂದೇ ಸಾರಿ ಬರೋದು. ಅಂಥ ಸನ್ನಿವೇಶದಲ್ಲಿ ಮಾತ್ರ ಮಾತುಗಳು ಬರುವಂಥಾದ್ದು. ಅದೂ, ಮಾತುಗಳು ಇಂಥವನು ಹೇಳಿದ್ದೂ ಅಂತ್ಹೇಳಿ ಇಲ್ಲಿ ಬರೋದಿಲ್ಲ. ಒಳಗಿಂದ ಮಾತುಗಳು ಬರ್ತದೆ.

ಗಾಂಧಿ ಎಂಬ ದೇಹ, ಆ ದೇಹದಲ್ಲಿ ಒಂದು ಶಕ್ತಿ ಇತ್ತು. ಅದಕ್ಕೆ ಸಂಬಂಧ ಇರೋದು. ಗಾಂಧಿ ಎಂಬ ದೇಹವನ್ನು ನಾವು ಒಪ್ಪೋದಿಲ್ಲ. ಆ ದೇಹದ ಮೂಲಕ ಆದ ಕೆಲಸವೂ ನಮಗೆ ಈಗ ಬ್ಯಾಡ. ಆ ದೇಹದಲ್ಲಿ ಒಂದು ಶಕ್ತಿ ಇತ್ತಲ್ಲಾ, ಅದ್ರ ವಿಚಾರ ಈಗ. ಅದು ಯಾವ ಶಕ್ತಿ ಅದು. ಅದು ಹಿಂದೆ ಎಲ್ಲಿತ್ತು. ಕೃಷ್ಣನ ವಿಗ್ರಹ ಯಾಕೆ ಬಂತು. ಹೋಗ್ಬೇಕು. ಮೂಲಕ್ಕೆ ನಾವು. ಆ್ಞಂ. ಕೃಷ್ಣನ ದೇಹದಲ್ಲಿದ್ದ ಶಕ್ತಿ ಯಾವ್ದು. ಅವ ಏನು ಹೇಳಿದ್ದಾನೆ ಸಂಭವಾಮಿ ಯುಗೇ ಯುಗೇ ಅಂತ ಹೇಳಿದ್ದಾನೆ. ಹೌದಾ? ಒಪ್ಪುತ್ತೀರಾ ನೀವು. ಅದನ್ನ ನೀವು ಒಪ್ಪೋದಿಲ್ಲ.

ಪರೀಕ್ಷಿತ – ಒಪ್ಪುವುದಿಲ್ಲ ಅನ್ನೋದನ್ನ ಬಿಡಿಯಯ್ಯಾ ನೀವು. ಖಂಡಿತ ಒಪ್ಪುತ್ತೇವೆ.

ಅಜ್ಜ – ಒಪ್ಪುತೀರಾ ಹಾಗಾದ್ರೆ ನಿಮ್ಮ ದೇಹದಲ್ಲಿರುವ ಶಕ್ತಿ ಯಾವುದದು. ಸಂಭವಾಮಿ ಯುಗೇ ಯುಗೇ ಅಂತ್ಹೇಳಿ ಇದೆ. ಹಾಗಾದ್ರೆ ಯಾವ ಶಕ್ತಿ ಅದು ಅಂಥಾ ಯುಗದಲ್ಲಿ ಬರುವ ಜನ್ರು ಏನು ಕೆಲಸ ಮಾಡ್ತಾರೆ. ಆ ಮೂಲ ಶಕ್ತಿ ಯಾವ್ದದು.

ಪರೀಕ್ಷಿತ – ಶಕ್ತಿ ಒಂದೆ. ಸತ್ಯ ಒಂದೆ.

ಅಜ್ಜ – ಇಲ್ಲಿ ಸಂಪೂರ್ಣ ವಿವರ ಬರ್ಬೇಕು. ಉತ್ತರ ಬರ್ಬೇಕು. ಇಲ್ಲದಿದ್ರೆ ಮಾತುಗಳು ಬರೋದಿಲ್ಲ.

ಪರೀಕ್ಷಿತ – ಪ್ರಶ್ನೆ ಕೇಳಿ, ಉತ್ತರ ಗ್ಯಾರೆಂಟಿ ಕೊಡ್ತೇನೆ ನಾನು. ನನಗೆ ಗೊತ್ತಿದ್ದನ್ನು ಹೇಳಿದ್ದು – ಕೇಳಿ ಅಜ್ಜ. ಅಲ್ಲಾ ಕೃಷ್ಣನ ದೇಹದಲ್ಲಿದ್ದ ಶಕ್ತಿ ಮೂಲ ಶಕ್ತಿ. ಅದಕ್ಕಿಂತ ಆಚೆಗಿನ ಸತ್ಯ ಇಲ್ಲ. ಅದು ಬಿಡಿ. ಅದು ಹೇಳಿದ್ದು "ನಾನು ಪ್ರತಿ ಯುಗದಲ್ಲೂ ಅವತರಿಸಿ ಬರ್ತೇನೆ" ಅಂತ, ಮಾನವ ದೇಹದಲ್ಲಿ ಹೌದಾ.

ಅಜ್ಜ – ಹೌದು.

ಪರೀಕ್ಷಿತ – ಮತ್ತೆ ನನ್ನ ದೇಹದಲ್ಲಿರುವ ಶಕ್ತಿ ಅದು ಬೇರೆಯೇ.

ಅಜ್ಜ – ಯಾವು

ಪರೀಕ್ಷಿತ – ಕೃಷ್ಣನ ದೇಹದಲ್ಲಿರುವ ಶಕ್ತಿಯು ನನ್ನ ದೇಹದಲ್ಲಿರುವ ಶಕ್ತಿ ಅಲ್ಲ. ಅದು ನನ್ನ ದೇಹದ ಒಳಗಿರುವ ಶಕ್ತಿಯ ಒಳಗಿರುವ ಶಕ್ತಿ, ವಿಷಯ ಅಷ್ಟೆ.

ಅಜ್ಜ – ಹ. ಹ. ಹ. ನೋಡುವ ಮುಂದೆ ನೋಡುವ.

ಪರೀಕ್ಷಿತ – ಎಲ್ಲವನ್ನು ಮುಂದಕ್ಕೆ ಹಾಕುವ ವಹಿವಾಟು ನಿಮ್ಮದು.

ಅಜ್ಜ – ಅದು ಹಾಗಲ್ಲಾ.

ಪರೀಕ್ಷಿತ – ಈಗ ನೀವು ಕೇಳಿದ್ರಿ ಈಗ ಎದ್ದು ನಿಂತು 'ಉತ್ತರ ಬರ್ಲಿ' ಅಂತ ಕೇಳಿದ್ರಿ. ಪ್ರಶ್ನೆಗೆ ಉತ್ತರ ಬರ್ಲಿ ಅಂತ ಹೇಳಿದ್ದಲ್ವಾ ನನ್ನಿಂದ.

ಅಜ್ಜ – ಪ್ರತಿಯೊಂದು ದೇಹದಲ್ಲಿರುವ ಶಕ್ತಿಯು ಒಂದೇ. ಆ ಮೂಲಶಕ್ತಿಯೇ ಗೊತ್ತಾಗ್ಲಿಲ್ವಾ. ಕೃಷ್ಣ ಹೇಳಿದ್ದಾನೆ. ಪ್ರತಿಯೊಂದು ದೇಹದಲ್ಲಿರುವವನು 'ನಾನು' ಅಂತ ಹೇಳಿದ್ದಾನೆ. ಅದರಲ್ಲಿ ನಿಜವಾಗಿ ನಂಬಿಕೆ ವಿಶ್ವಾಸ ಇದ್ರೆ. ಅಲ್ಲೇ ಇರೋದು. ಈಗ ಇಲ್ಲಿರುವ ಶಕ್ತಿ ಅದೇ. ಅವನ ಮತ್ತೊಂದು ರೂಪ. ಆ್ಞಂ. ಗೊತ್ತಾಗ್ಲಿಲ್ಲ. ಹಾಗೆ ಪ್ರತಿಯೊಂದು ದೇಹದಲ್ಲೂ ಇರೋದು ಅನ್ನೋದು ನಿಮಗೆ ಅನುಭವದಲ್ಲಿ ಕಾಣ್ತದಾ. 'ಹೋ ಅವನೇ ಇರುವವನು' ಅಂತ ಕಾಣ್ತದಾ. ಇದು ಧ್ಯಾನಕ್ಕೆ ಹೋದಾಗ ಗೊತ್ತಾಕ್ತದೆ. ಆ ಒಂದು ಮೂಲ ಶಕ್ತಿಯನ್ನು ಬಿಟ್ಟು ಜಗತ್ತಿನಲ್ಲಿ ಬೇರೆ ಯಾವ ಶಕ್ತಿಗಳೇ ಇಲ್ಲ. ಬೇರೆ ಬೇರೆ ರೂಪಗಳಲ್ಲಿ ಬಂದು ಪ್ರತಿಯೊಂದು ದೇಹಗಳಲ್ಲಿರುವಂಥಾದ್ದು ಅವನೇ ಎಂಬುದಾಗಿ ಸಿಗ್ನಲ್ ಕೊಡ್ತಾನಲ್ಲ.

ಒಬ್ಬರು – ಧ್ಯಾನ ಹೇಗೆ ಮಾಡೋದು.

ಅಜ್ಜ – ಅದು ಮತ್ತಿನ ವಿಚಾರ.

ಒಬ್ಬರು – ನೀವು ಹೇಳಿದ್ರಿ ಧ್ಯಾನ ಮಾಡುವಾಗ ಆ ಅನುಭವ ಆಗುತ್ತೆ ಅಂತ. ಧ್ಯಾನ ಹ್ಯಾಗೆ ಮಾಡೋದು.

ಅಜ್ಜ – ನೀವು ಮೊದಲು ಮನಸ್ಸನ್ನು ಒಳಗೆ ಹಾಕಪ್ಪಾ. ಹೊರಗಿನ ಆಸೆಯನ್ನು ಬಿಡಿ ಮೊದಲು. ಬ್ಯಾಡ ಬಿಡಿ ತೀಕ್ಷ್ಣವಾದ ಮಾತುಗಳು ಬರ್ತದೆ ನಮಗೆ. ಬ್ಯಾಡ ನೀವು ಮೌನದಿಂದ ಕೂತುಕೊಳ್ಳಿ. ಅದೇ ಧ್ಯಾನ. ಸಾಧ್ಯ ಉಂಟಾ? ಐದು ನಿಮಿಷ ಮೌನದಲ್ಲಿ ಕೂತುಕೊಳ್ಳಿಕ್ಕೆ ನಿಮಗೆ ಸಾಧ್ಯ ಉಂಟಾ? ಅಲ್ಲಾ ಈವರೆಗೆ ಆಗಿದೆಯೋ. ನಾವು ಹದಿನೈದು ವರ್ಷ ಧ್ಯಾನ ಮಾಡಿದವರಿಗೆ ಸವಾಲ್ ಹಾಕಿದ್ದೇವೆ. ಅವ್ರು ಒಪ್ಪಿದ್ದಾರೆ. ನಾವು ಧ್ಯಾನಕ್ಕೆ ಶುರು ಮಾಡ್ಲಿಲ್ಲಾ ಅಂತ್ಹೇಳಿ. ನಿಮ್ಮ ಮನಸ್ಸು ಬಹಿರ್ಮುಖ ಆಗಿದ್ರೆ ನೀವು ಹ್ಯಾಗೆ ಧ್ಯಾನ ಮಾಡ್ತೀರಾ ಅಂತ್ಹೇಳಿ. ಈಗ ಇರುವ ಈ ನಾನುವಿಗೆ, ಈ ಅಹಂಗೆ ಧ್ಯಾನ ಮಾಡುವ ಲೈನ್ ಸಿಕ್ತದಾ. ದೇಹವೇ ನಾನು ಅಂತ್ಹೇಳುವ ಬುದ್ಧಿವಂತಿಕೆ ಉಂಟಲ್ಲಾ. ಅದಕ್ಕೆ ಧ್ಯಾನ ಮಾಡ್ಲಿಕ್ಕೆ ಆಕ್ತದಾ ಪರಮಾತ್ಮನನ್ನು. ಆ್ಞಂ. ಪರಮಾತ್ಮ ಇದ್ದಾನೆ ಅಂತ್ಹೇಳಿ ಗೊತ್ತುಂಟಾ ನಿಮಗೆ. ಗೊತ್ತುಂಟಾ? ಇಲ್ಲ. ಗೊತ್ತುಂಟು ಅಂತ್ಹೇಳಿ ನೀವು ತಿಳಿದುಬಿಟ್ಟಿದ್ದೀರಿ. ನೀವು ಪೂಜೆ ಮಾಡ್ಬೋದು ಏನೆಲ್ಲಾ ಮಾಡ್ಬೋದು. ಯಾಕೆ? ಅದು ವಾಡಿಕೆಯಿಂದ ನಡಕೊಂಡು ಬಂದದ್ದು ಅಂತ. ನಿಜವಾಗಿ ಗೊತ್ತುಂಟಾ? ಕಾರ್ಯದಲ್ಲಿ ಗೊತ್ತುಂಟಾ. ದೇಹದಲ್ಲಿರುವವನು ನಾನು ಅಂತ್ಹೇಳಿ ಗೊತ್ತುಂಟಾ ಈಗ. ಇಲ್ಲ. ಇಲ್ಲಲ್ಲಾ. ಸಾಕು. ಒಂದೇ ಮಾತು ಸಾಕು. ಆ ಇರುವವನಲ್ಲಿ ಈ ಮನಸ್ಸನ್ನು ಕೊಂಡ್ಹೋಗಿ ಇಡಿ. ಆ್ಞಂ. ಮತ್ತೆಲ್ಲಾ ಮೊದಲು ಕೃತಿಗೆ ಬನ್ನಿಯಪ್ಪಾ. ಕೃತಿಗೆ ಬಾರದೆ ನಾವು ಒಂದು ಗಂಟೆ ಮಾತಾಡಿದ್ರೂ ಕೂಡ, ಎಷ್ಟು ಆರ್ಭಟ ಕೊಟ್ರೂ ಕೂಡ ಒಂದು ಶಬ್ದ ಅರ್ಥಾಗ್ಲಿಕ್ಕಿಲ್ಲ.

ಮೂಲ ಶಕ್ತಿಯೇ ಬಂದದ್ದು. ಅದು ಆ ದೇಹದಲ್ಲಿ ಹಿಂದೆ ಇತ್ತು. ಅಷ್ಟೇ. ಅಲ್ಲಿ ಕೆಲಸ ಮಾಡಿಕೊಂಡಿತ್ತು. ಅಲ್ಲಿ ಅಪೂರ್ಣ ಕೆಲಸವಾಯ್ತು. ಇಲ್ಲಿ ಬಂತು ಈಗ ಎಂಬುದು ಸಿದ್ಧಾಂತ ಇದು. ಈಗ ಈ ದೇಹದಲ್ಲಿ ಈ ಶಕ್ತಿ ಉಂಟು. ಈ ದೇಹಕ್ಕೂ ಈ ಶಕ್ತಿಗೂ ಸಂಬಂಧವೇ ಇಲ್ಲ. ಅದೇ ರೀತಿ ಆ ದೇಹದಲ್ಲಿದ್ದಾಗ ಅದಕ್ಕೂ ಸಂಬಂಧವೇ ಇಲ್ಲ. ಆ ದೇಹವನ್ನು ಉಪಯೋಗಿಸಿಕೊಂಡಿತು ಅದು. ಆ ದೇಹಕ್ಕೆ ಸಂಬಂಧವೇ ಇಲ್ಲ. ಅರ್ಥಾಗ್ಲಿಲ್ವಾ. ಹೌದಲ್ವೋ ಇದು.

ಒಬ್ಬರು – ಹೌದು.

ಅಜ್ಜ – ಸನ್ನಿವೇಶ ಬಂದಾಗ ಮಾತುಗಳು ಬರುವಂಥಾದ್ದು.

ಪರೀಕ್ಷಿತ – ಆ ದೇಹದಲ್ಲಿ ಆದ ಕೆಲಸಗಳ ಬಗ್ಗೆ ಪ್ರಶ್ನೆ ಬಂದರೆ ಆಗ ಅದಕ್ಕೆ ಉತ್ತರ ಕೊಡುವ ಜವಾಬ್ದಾರಿ ಉಂಟೋ ಇಲ್ವಾ? ನಿಮಗೆ ಆ ದೇಹದ ಸಂಬಂಧ ಇರುರುವುದು ಬ್ಯಾಡ. ಸರಿ. ಆದರೂ ಪ್ರಶ್ನೆಗಳಿಗೆ ಉತ್ತರ ಕೊಡ್ಬೇಕಲ್ಲ.

ಅಜ್ಜ – ಉತ್ತರ ಕೊಟ್ಟಾಗಿದೆಯಲ್ಲಾ.

ಪರೀಕ್ಷಿತ – ಉತ್ತರ ನೀವು ಕೊಡ್ಲಿಲ್ಲಲ್ಲಾ.

ಅಜ್ಜ – ಕೊಟ್ಟಾಗಿದೆಯಲ್ಲಾ. ಬರಹ ಮೂಲಕ ಕೊಟ್ಟಾಗಿದೆಯಲ್ಲಾ. ವಿಚಾರ ಮಾಡಬೇಕು.

ಪರೀಕ್ಷಿತ – ಬರಹ ಮೂಲಕ ಕೊಟ್ಟಾಗಿದೆಯಾ.

ಅಜ್ಜ – ಕೊಟ್ಟಾಗಿದೆಯಪ್ಪಾ. ನೀವು ವಿಚಾರಕ್ಕಿಳಿರಿ. ಇಳಿದ್ರೆ ಉಂಟು. ಯಾಕೆ ನಾವು ಕೊಟ್ಟ ವಿವರಕ್ಕೆ ಲೆಕ್ಕ ಉಂಟಾ. ಅಷ್ಟು ಕೊಟ್ಟಿದ್ದೇವೆ. ಅದ್ಯಾರೊಬ್ಬರೂ ಏನೂ ವಿಚಾರ ಮಾಡ್ದಿದ್ರೆ ನಾವೇನು ಮಾಡ್ಬೇಕು. ನಾವು ಎಷ್ಟು ಹೇಳಿದ್ರೂ ಅಷ್ಟೆ. ಈಗ ಕೆಲವು ಜನ್ರು ಹೇಳ್ತಾರೆ, "ನೀವು ಈ ದೇಹಕ್ಕೆ ಯಾಕೆ ಬಂದದ್ದೂ" ಅಂತ. ನಾವು ಯಾವ ದೇಹಕ್ಕ್ಹೋದ್ರೂ ಕೇಳೋದು ಇದೇ ಪ್ರಶ್ನೆ ಅಲ್ವಾ. ಅದು ಮುಗಿಲಿಕ್ಕುಂಟ. ಅವರ ಪ್ರಶ್ನೆಗಳು ಮುಗಿಲಿಕ್ಕುಂಟಾ. ಹಾಗೇನೇ ಇದು. ನೋಡಿ, ದಿವ್ಯ ಜೀವನವನ್ನು ನೋಡಿ ಅದ್ರಲ್ಲಿ ಏನುಂಟು ನೋಡಿ. ಅದ್ರಲ್ಲಿ ಯಾರ ಜೀವನ ಚರಿತ್ರೆ ಉಂಟು ಅದ್ರಲ್ಲಿ ನೋಡಿ.

ಪರೀಕ್ಷಿತ – ಪ್ರತಿಯೊಂದು ದೇಹದಲ್ಲಿರುವ ಶಕ್ತಿ ಒಂದೇ ಅಂತ ಹೇಳಿದ್ರೆ, ಈಗ ನೋಡಿ ಕೃಷ್ಣ ಏನ್ಹೇಳಿದ್ದಾನೆ ಅಂದ್ರೆ, ಎಲ್ಲರ ಹೃದಯದಲ್ಲಿರುವವನು ನಾನು ಅಂತ. ಈ 'ಎಲ್ಲರ' ಅಂತ ಹೇಳಿದ್ರೆ ಯಾರು?

ಅಜ್ಜ – ಎಲ್ಲರ ಹೃದಯ ಅಂತ್ಹೇಳಿದ್ರೆ ಪ್ರತಿಯೊಂದು ಹೃದಯದಲ್ಲಿ.

ಪರೀಕ್ಷಿತ – ಉಹೂ. "ಸರ್ವಸ್ಯ ಚಾಹಂ ಹೃದಿ ಸನ್ನಿವಿಷ್ಟಃ"

ಅಜ್ಜ – ಅಂದ್ರೆ.

ಪರೀಕ್ಷಿತ – ಪ್ರತಿಯೊಬ್ಬರ ಹೃದಯದಲ್ಲಿಯೂ "ಅಹಂ ಸನ್ನಿವಿಷ್ಟಃ" ನಾನು ಸನ್ನಿಹಿತನಾಗಿದ್ದೇನೆ. ಆ 'ಎಲ್ಲರ' ಅಂದ್ರೆ ಯಾರ? ಅದು ನನಗೆ ಹೇಳಿ.

ಅಜ್ಜ – ಎಲ್ಲರ ಅಂದ್ರೆ . . .

ಪರೀಕ್ಷಿತ –  ಎಲ್ಲರ ಅಂದ್ರೆ ಹಾಗಾದ್ರೆ ಎಲ್ಲರೂ ಇದ್ದಾರೆ ಅಂತ್ಹೇಳಿ ಆಯ್ತು. ಇವನೊಬ್ಬನೇ ಅಲ್ಲ. ಆ ಎಲ್ಲರೂ ಇದ್ದಾರೆ. ಎಲ್ಲರ ಒಳಗೆ ಇವನು ಇದ್ದಾನೆ. ಹಾಗೆ ಅದರರ್ಥ.

ಅಜ್ಜ –  ಛೆ ಛೆ ಛೆ ಹಾಗಲ್ಲ.

ಪರೀಕ್ಷಿತ –  ಸರ್ವ ಅನ್ನುವ ಶಬ್ದಕ್ಕೆ ಅರ್ಥ ಏನಯ್ಯ ಹಾಗಾದ್ರೆ.

ಅಜ್ಜ –  ನೋಡುವ ಗೋವಿಂದಾಚಾರ್ಯರು ಬರ್ಲಿ.

ಪರೀಕ್ಷಿತ –  ಗೋವಿಂದಾಚಾರ್ಯರು ಬರ್ಲಿ ಬಿಡಿ. ಹ. ಹ. ಹ.

ಅಜ್ಜ –  ಅವ ಹೇಳಿದ್ದು ಅದಲ್ಲಾ. ಪ್ರತಿಯೊಂದು ದೇಹದಲ್ಲಿರುವವನು ನಾನು ಅಂತ.

ಪರೀಕ್ಷಿತ –  ಅಲ್ಲಾ ಪ್ರತಿಯೊಬ್ಬರ ಹೃದಯದಲ್ಲಿರುವವನು ನಾನು ಅಂತ. ಆ 'ಪ್ರತಿಯೊಬ್ಬರು' ಇದ್ದಾರೆ ಹಾಗಾದ್ರೆ. ಪ್ರತಿಯೊಬ್ಬರೊಳಗೂ ಇರುವ ಒಬ್ಬನಿದ್ದಾನೆ. ಎರಡು ಸಂಗತಿ ಉಂಟು. ಹೌದಾ. ಹಾಗಾದ್ರೆ ದೇಹ ಮತ್ತು ಅದರೊಳಗಿರುವ ಕೃಷ್ಣ ಮಾತ್ರ ಇರುವುದಲ್ಲ. ಈ ದೇಹ, ದೇಹದೊಳಗಿರುವ ಪ್ರತಿಯೊಬ್ಬರು ಅಂದ್ರೆ ಒಂದು ಶಕ್ತಿ, ಅದರ ಒಳಗೆ ಎಲ್ಲರೊಳಗೆ ಒಬ್ಬನೇ ಇದ್ದಾನೆ. ಆ ಎಲ್ಲರೂ ಎಂದರೆ ಯಾರು. ಅದು ಬರ್ಲಿ.

ಇಷ್ಟು ವ್ಯತ್ಯಾಸ ಯಾಕಜ್ಜ ಪ್ರತಿಯೊಬ್ಬರಲ್ಲಿ. ಸಾಕ್ಷಾತ್ಕಾರ ಆದವರಲ್ಲಿ ಯಾಕಿಷ್ಟು ವ್ಯತ್ಯಾಸ. ರಮಣರದ್ದು ಒಂದು ನಮೂನೆ. ಪರಮಹಂಸರದ್ದು ಮತ್ತೊಂದು ನಮೂನೆ. ಸ್ವಭಾವಗಳಲ್ಲಿ ಯಾಕಿಷ್ಟು ವ್ಯತ್ಯಾಸ. ಎಲ್ಲರೂ ಒಂದೇ ಲೆಕ್ಕ ಮಾತಾಡ್ಬೇಕಿತ್ತಲ್ಲ. ದೇಹದಲ್ಲಿರುವುದು ಒಂದೇ ಅಂತ ಆದ್ರೆ. ಅದ್ಯಾಗೆ ಅಜ್ಜ ಹಾಗಾದ್ರೆ. ಇಗೊಳ್ಳಿ ಓ ಅಜ್ಜ. ಅದು ಹ್ಯಾಗೇ ಅಂತ ಪ್ರಶ್ನೆ. ಶಂಕರಾಚಾರ್ಯರು ಸೌಂದರ್ಯಲಹರಿ ಸಾಕ್ಷಾತ್ಕಾರ ಆದವರು. ಸೌಂದರ್ಯ ಲಹರಿ ಅನ್ನುವ ಕಾವ್ಯವನ್ನು ಬರೀತಾರೆ. ಪರಮಹಂಸರಿಗೆ ಒಂದು ವಾಕ್ಯ ಗೀಚಲಿಕ್ಕೆ ಬರೋದಿಲ್ಲ.

ಅಜ್ಜ –  ಹ್ಞಾಂ. ಹ. ಹ. ಹ.

ಪರೀಕ್ಷಿತ –  ಹೌದು ಒಂದು ವಾಕ್ಯ ಗೀಚಲಿಕ್ಕೆ ಬರೋದಿಲ್ಲ. ಇದ್ಯಾಕೆ ಹೇಳಿ.

ಅಜ್ಜ –  ಹೇಳ್ಲಿಕ್ಕೆ ನಾವು ಯಾರು? ನಿಮ್ಮನ್ನು ಬಿಟ್ಟು ನಾವಿಲ್ಲ. ಎಲ್ಲಿ ಪ್ರಶ್ನೆ ಉಂಟೋ ಅಲ್ಲಿಯೇ ಉತ್ತರವೂ ಉಂಟು.

ಪರೀಕ್ಷಿತ –  ಹೇಳ್ಲಿಕ್ಕೆ ನಾವು ಯಾರು? ಅಂತ ಹೇಳುವ ಇವರು ಯಾರು? ಹ. ಹ. ಹ. ನನಗೆ ಐಚಾರಿಕವಾದ ಉತ್ತರ ಬೇಕು.

ಅಜ್ಜ –  ಉತ್ತರ ಸಿಕ್ತದೆ ಮುಂದೆ.

ಪರೀಕ್ಷಿತ –  ನಾನು ಗಟ್ಟಿ ಮಾತಾಡಿದ್ರೆ ಇದು ಪ್ರಶ್ನೆಯೇ ಅಲ್ಲ ಅಂತ ಹೇಳ್ತಾರೆ.

ಅಜ್ಜ –  ಗೊಂದಲಕ್ಕೆ ಪರಿಹಾರ ಕೊಟ್ಟು, ಪರಿಹಾರದಲ್ಲಿ ಗೊಂದಲವನ್ನು ನಿವೃತ್ತಿ ಮಾಡಬೇಕು. ಹಾಗುಂಟು. ಬರೀ ಮಾತಿನಿಂದ ಗೊಂದಲವನ್ನು ನಿವೃತ್ತಿ ಪಡಿಸಲಿಕ್ಕೆ ಸಾಧ್ಯ ಇಲ್ಲ. ಈಗ ಒಂದು ರೋಗ ಉಂಟು ಅಂತ್ಹೇಳಿ ಆದ್ರೆ, ಅದಕ್ಕೆ ಔಷಧಿ ಕೊಡ್ಬೇಕು. ಅದಕ್ಕೆ ಔಷಧಿ ಕೊಟ್ರೆ ಅಲ್ಲಿ ಗುಣ ಆಕ್ತದೆ. ಹಾಗೆ ಆ ಗೊಂದಲ ಎಲ್ಲುಂಟೋ, ಅಲ್ಲೇ ಅದಕ್ಕೆ ಪರಿಹಾರ ಉಂಟು. ಆ ಗೊಂದಲವನ್ನು ನಿವೃತ್ತಿ ಮಾಡಿಕೊಳ್ಳಿಕ್ಕೆ . . .  ಆ ಮನಸ್ಸಿಗೆ ಗೊಂದಲ ಇರೋದು. ಆ ಮನಸ್ಸನ್ನು ಹೇಗೆ ಸರ್ವೀಸ್ ಮಾಡ್ಬೇಕು ಎಂಬುದಕ್ಕೆ ನಿವೃತ್ತಿ ಸ್ಥಾನ ಉಂಟು. ಅಲ್ಲಿ ಉಂಟು ಗೊಂದಲ ಪರಿಹಾರಕ್ಕೆ. ಇಲ್ಲವಾದ್ರೆ ಗೊಂದಲ ಪರಿಹಾರ ಇಲ್ಲವೇ ಇಲ್ಲ.

ಪರೀಕ್ಷಿತ – ಅದು ಒಂದು ರೀತಿಯಿಂದ ಸರಿ.

ಅಜ್ಜ – ಈಗ ಅಲ್ಲಿ ಒಂದು ಮನಸ್ಸುಂಟು. ಅದಕ್ಕೆ ಗೊಂದಲ ಇರೋದು ಈಗ ಅಲ್ಲಿ ಅದಕ್ಕೆ . . .

ಪರೀಕ್ಷಿತ – ಆ ಮನಸ್ಸಿಗೆ ಯಾವ ರೀತಿಯಲ್ಲಿ ಗೊಂದಲ ಆಯ್ತು. ಅದೇ ರೀತಿಯಲ್ಲಿ ಉತ್ತರ ಬೇಕು.

ಅಜ್ಜ – ಬರೀ ಉತ್ತರ ಸಿಕ್ಕೋದಿಲ್ಲ. ಬರೇ ಉತ್ತರ ಇಲ್ಲಿ ಇಲ್ಲ.

ಪರೀಕ್ಷಿತ – ಇಲ್ಲಿ ಕೇಳಿ, ಬರೇ ಉತ್ತರ ಅಲ್ಲಾ ಅಂತ್ಹೇಳಿ ಆದ್ರೆ, ಯಾಕಯ್ಯಾ ಈ ಆಚಾರ್ಯರುಗಳು ಇಷ್ಟಿಷ್ಟು ಸಿದ್ಧಾಂತವನ್ನು ಬರೀಬೇಕು. ವೈಚಾರಿಕವಾದ ಒಂದು ಸಮಾಧಾನವೂ ಬೇಕು.

ಅಜ್ಜ – ಅದೆಲ್ಲ ಪ್ರಶ್ನೋತ್ತರಗಳು ರಾಮಾಯಣದ ಹಾಗೆ ಹೋಕ್ತಾ ಉಂಟು. ನಮಗೆ ಈಗ ಪ್ರಕೃತ ಏನು ಬೇಕು? ನಮ್ಮ ಜೀವನದಲ್ಲಿ ಯಾವ ರೀತಿಯ ನಡತೆಯಿಂದ ನಾವು ಮುಂದುವರಿಸಿಕೊಂಡು ಹೋಗ್ಬೇಕು. ಕೃತಿಯ ರೂಪದಲ್ಲಿ ಇಲ್ಲದ ಯಾವ ಪ್ರಶ್ನೆಗಳಿಗೂ ಇಲ್ಲಿ ಉತ್ತರ ಇಲ್ಲ.

ಪರೀಕ್ಷಿತ – ಇಲ್ಲಿ ಬಂದ್ರೆ, ಕೃತಿಗೆ ಬಂದ್ರೆ, ನಾನು ಸೋತದ್ದೇ. ನಾನು ಮೊದಲೇ ಹೇಳಿದ್ದೇನೆ ಕೃತಿಯ ರೂಪದಲ್ಲಿ ನನ್ನಿಂದ ಸಾಧ್ಯ ಇಲ್ಲ ಅಂತ.

ಅಜ್ಜ – ಯಾಕೇಂದ್ರೆ ಇಲ್ಲಿ ಯಾವ ಅನುಭವಗಳಿವೆಯೋ ಅದನ್ನು ಮಾತ್ರ ಹೇಳಬೇಕಷ್ಟೇ ಹೊರತು, ಪ್ರವಚನ ಭಾಷಣಗಳಿಗೆ ಸಂಬಂಧಪಟ್ಟದ್ದು ಯಾವ್ದೂ ಇಲ್ಲಿಲ್ಲ. ಇಲ್ಲಿ ನಮ್ಮ ಜೀವನದಲ್ಲಿ ಯಾವ್ದು ನಡೆದಿದೆ ಅದನ್ನು ಮಾತ್ರ ನಮಗೆ ಹೇಳುವಂಥಾ ರೈಟ್ ಇರೋದು. ಇಲ್ಲವಾದ್ರೆ ನಾವು ಅನುಭವದಲ್ಲಿಲ್ಲದ್ದನ್ನ ಹೇಳಿದ್ರೆ ನಾವು ಡೊಂಗಿ ಆಯ್ತು. ತತ್ವ ಸಿದ್ಧಾಂತಗಳು ಎಲ್ರಿಗೂ ಗೊತ್ತುಂಟು. ಅದನ್ನು ನಾವು ಹೇಳಬೇಕಾ? ನಮ್ಮ ಜೀವನದಲ್ಲಿ ಏನು ನಡೆಯಿತೋ ಅದನ್ನು ಹೇಳುವಂಥಾ ಅರ್ಹತೆ ನಮಗುಂಟು. ಅದು ನಮ್ಮ ಜೀವನದಲ್ಲಿ ನಡತೆಯಲ್ಲಿ ಬಾರದಿದ್ದ ಒಂದು ಶಬ್ದವನ್ನು ಹೇಳಿದ್ರೆ ಇದು ಡೊಂಗಿ ಅಂತ್ಹೇಳಿ ಆಯ್ತು. ನಮ್ಮ ಆತ್ಮ ಒಪ್ಪೋದಿಲ್ಲ.

ಪರೀಕ್ಷಿತ – ನಾವು ಹೇಳುವುದು ಒಂದೆ. ಏನು ಗೊತ್ತಾ – ಗಾಂಧೀಜಿಯವರ ದೇಹದಲ್ಲಿ ಆ ಆತ್ಮ ಇದ್ದು ಅದರಲ್ಲೇ ವಿಕಾಸ ಆಕ್ತಿದ್ರೆ, ಒಂದು ಅದ್ಭುತವಾದ ವಿಚಾರ ಧಾರೆಯನ್ನು ಅದು ಕೊಡ್ತಿತ್ತು. ಅದು ಇದಕ್ಕೆ ಬಂದು ಒಟ್ಟಾರೆ ಕೆಟ್ಟಿತು ಅಂತ ನಾನು ಹೇಳೋದು. ಹ. ಹ. ಹ. ಯಾಕೆ ಗೊತ್ತಾ ಆ ದೇಹದಲ್ಲಿರುವಾಗ, ಯಾವುದೇ ಒಂದು ಅತ್ಯಂತ ಸಣ್ಣ ಪ್ರಶ್ನೆಯಾದ್ರೂ ಅದು, ಅಷ್ಟು ಸುಂದರವಾದ ಒಂದು ವಿವರಣೆ ಕೊಡ್ತಾ ಇತ್ತು. ಯಾಕೇಂದ್ರೆ ಆ ಮನಸ್ಸಿನ ರೀತಿ ಹಾಗಿತ್ತು. ಎಲ್ಲಾದ್ರೂ ಅದರಲ್ಲೇ ಆಕ್ತಿದ್ರೆ, ಅಯ್ಯೋ ಛೆ. ಅದರ ಕತೆಯೇ ಬೇರೆ ಇತ್ತು.

ಅಜ್ಜ – ಆ ಮನಸ್ಸು ಬುದ್ಧಿ ಹಾಗಿತ್ತು. ಆ ಮನಸ್ಸು ಬುದ್ಧಿ ಇಲ್ಲಿ ಇರ್ತಿದ್ರೆ ಅದರ ಕಥೆಯೇ ಬೇರೆ ಇತ್ತು. ಆದ್ರೆ ಈಗ ಈ ದೇಹ ಅಂದ್ರೆ ಸ್ಥೂಲ ದೇಹ ಬೇರೆ. ಸೂಕ್ಷ್ಮದೇಹವೂ ಬೇರೆ. ಅದಕ್ಕೆ ಆ ಶಕ್ತಿಗೆ ಮುಂದಿನ ಹಂತಕ್ಕೆ ಎಷ್ಟು ಬೇಕೋ ಅಂಥಾ ದೇಹದ ಅಂಥಾ ಮನಸ್ಸನ್ನು ಅದು ಪ್ರವೇಶ ಮಾಡಿತು.

ಪರೀಕ್ಷಿತ – ಅಲ್ಲೇ ಎಲ್ಲಾದ್ರೂ ಆಗಿಬಿಟ್ಟಿದ್ರೆ. ಆಧ್ಯಾತ್ಮದ ಒಂದು ವಾಙ್ಮಯಕ್ಕೆ ಒಂದು ಹೊಸಾ ಚಿಂತನೆ ಬರ್ತಿತ್ತು.

ಅಜ್ಜ – ಅದು ಭವಿಷ್ಯತ್ತಲ್ವಾ. ನೋಡುವ.

ಪರೀಕ್ಷಿತ – ಭಯಂಕರ ಸಂಗತಿ ಅಯ್ಯಬ್ಬಾ. ವ್ಯಕ್ತಿ ಬೇರೆ ಆಗಿ, ಸೂಕ್ಷ್ಮದೇಹ ಬೇರೆ ಆಗಿಬಿಟ್ಟಿತು ಈಗ. ಈ ದೇಹದ ಮನಸ್ಸಿಗೆ, ಬುದ್ಧಿಗೆ, ಆ ದೇಹದ ಅಂದ್ರೆ ಗಾಂಧೀಜಿ ದೇಹದ ಒಂದು ಸುಸಂಬದ್ಧವಾದ ಒಂದು ತರ್ಕಬದ್ಧ ವಿವರಣೆಯನ್ನು ಕೊಡ್ಲಿಕ್ಕೆ ಇದಕ್ಕೆ ಆಗೋಲ್ವಾ ಅಜ್ಜ. ಓಹೋ ಇವರ ಕ್ರಮ ಅದಲ್ಲ ಅಲ್ವಾ.

ಅಜ್ಜ – ಇಲ್ಲಿ ಹೇಗೆ ಅಂದ್ರೆ ಅದನ್ನು ಮುಂದುವರಿಸುವುದು ಮಾತ್ರ. ಪ್ರತಿಯೊಂದು ಜೀವಾತ್ಮನೂ ಹಾಗೆ ಹ್ಯಾಗೇಂತ ಕೇಳಿದ್ರೆ. ಜೀವಾತ್ಮನು ಜನ್ಮಕ್ಕೆ ಬಂದ್ರೆ ಹಿಂದಿನದ್ದನ್ನೇ ಇಲ್ಲಿ ಮುಂದುವರಿಸುವಂಥಾದ್ದು. ನೀವೆಲ್ಲ ವಿಚಾರ ಮಾಡಿ ಅಪ್ಪ ಅಷ್ಟೇ. ಮುಂದಕ್ಕೆ ನೋಡುವ.

ಪರೀಕ್ಷಿತ – ನಾವು ಪ್ರಶ್ನೆ ಕೇಳಿದ ಕೂಡಲೇ ನಿಮ್ಮ ಉತ್ತರ ಅಷ್ಟೇ "ಮುಂದಕ್ಕೆ ನೋಡುವ" ಅಂತ. ಹಾಗಾಗಿ ನನಗೆ ಅದೊಂದು ಪ್ರಶ್ನೆ ಉಂಟಜ್ಜ. ಪ್ರತಿಯೊಂದು ದೇಹದಲ್ಲಿರುವವನು ನಾನೆ ಅನ್ನುವ ವಿಚಾರದಲ್ಲಿ.

ಅಜ್ಜ – ಮೂಲಶಕ್ತಿ ಒಂದೆ.

ಪರೀಕ್ಷಿತ – ಮೂಲಶಕ್ತಿ ಅದು ಕರೆಕ್ಟ್ ಅದು ಒಂದೆ. ಆದ್ರೆ ಪ್ರತಿಯೊಬ್ಬರು ಬೇರೆ ಅಲ್ವಾ.

ಅಜ್ಜ – ಮೌನ.

ಪರೀಕ್ಷಿತ – ಈಗ ಅರ್ಧದಲ್ಲಿ ಬಾಕಿ ಆಯ್ತು. ಹ. ಹ. ಎಲ್ಲವೂ ಅರ್ಧದಲ್ಲಿ ಬಾಕಿ. ಅದೊಂದು ಏನು? ಹ. ಹ. ಹ. ಪ್ರಶ್ನೆ ಕೇಳಿದ ಕೂಡ್ಲೆ, ಪ್ರಶ್ನೆ ಕೇಳುವವ ಯಾರು? ಅಂತ ಹೇಳಿ ಅದೊಂದೆ ಅವರದ್ದು. ಹ. ಹ. ಹ. ಪಜ್ಜ ಆಯ್ತಲ್ಲಾ. ಇವ ತಲೆ ಮೇಲಿ ಕೈ ಇಟ್ಟು ಕೂತ್ಕೊಬೇಕು ಅಷ್ಟೆ. ಹ. ಹ. ಒಂದೊಂದು ಹುಡುಕುತ್ತಾರೆ. ಭಯಂಕರ ಸಂಗತಿ ಅದು. ಸುಮಾರು ಸರ್ತಿ ನೋಡಿದ್ದೇನೆ ನಾನು ಪ್ರಶ್ನೆ ಇವಂದು ಎರಡು ಮೂರು ಜಾಸ್ತಿ ಆದ್ರೆ ಕೂಡ್ಲೆ, ಅದೊಂದು ಕೇಳಿದ ಕೂಡ್ಲೆ ಇವ ಸುಮ್ಮನೆ, ಒಳ್ಳೆ ಮದ್ದು ಅದು.

ಅಜ್ಜ – ಒಳ್ಳೆ ಮದ್ದ ಅದು.

ಪರೀಕ್ಷಿತ – ಒಳ್ಳೆ ಮದ್ದು ಅಂದ್ರೆ, ಏನೂ ಮಾಡ್ಲಿಕ್ಕೆ ಉಪಾಯ ಇಲ್ಲ ಇವ್ನಿಗೆ. ಎಂಥ ಮಾಡುವುದು ಇವ. ಛೆ.

ಅಜ್ಜ – ಹಾಗಿದ್ದವರು ಇದ್ರು ಆಗ.

ಪರೀಕ್ಷಿತ – ಅದು ಪರಮಹಂಸರದ್ದು ಹಾಗೆ. ಇಂಥ ಪ್ರಶ್ನೆಗಳನ್ನು ಕೇಳಿದ ಕೂಡ್ಲೆ. ಇಂಥ ವೈಚಾರಿಕ ಪ್ರಶ್ನೆಗಳನ್ನು ಕೇಳಿದ ಕೂಡ್ಲೆ ಅವ್ರು ಹೇಳೋರು. ನೀನು ಬಂದದ್ದು ಯಾಕಪ್ಪಾ ತೋಟದಲ್ಲಿರುವ ಎಲೆ ಲೆಕ್ಕ ಮಾಡ್ಲಿಕ್ಕೋ ಅಲ್ಲ ಹಣ್ಣು ತಿಂಲ್ಲಿಕ್ಕೋ. ಪಜ್ಜ್ ಆಯ್ತಲ್ಲಾ.

ಅಜ್ಜ – ಹಾಂ ನಮ್ದು ಅದೇ.

ಪರೀಕ್ಷಿತ – ಈ ಎರಡು ಪ್ರಶ್ನೆಗಳನ್ನ ವಿವರಿಸ್ಬೇಕು ಅಜ್ಜ. ಛೆ. ಎಲ್ಲರೂ ಕೇಳಿದ್ರೆ ಸರಿ. ಹಾಗೆ ಹೇಳದೆ ಉಪಾಯ ಇಲ್ಲ. ಇವನಿಗೆ ವಿವರಿಸಿ ಬಡ್ದಿತು. ಯಾರಾದ್ರೂ ಎರಡು ಜನ ನಿಜವಾಗಿ ಕೇಳಿದ್ರೆ.

ಅಜ್ಜ – ಆ ಎರಡು ಜನ ಯಾರೂ ಅಂತ್ಹೇಳಿ. ಹ. ಹ. ಹ. ಎಲ್ಲರೂ ಹೀಗೆಯಾ.

ಪರೀಕ್ಷಿತ – ಭಾರೀ ಕಷ್ಟ ಕಾಣ್ತದೆ. ಆಚಾರ್ಯ ಶಂಕರರು, ಮಧ್ವರು, ರಾಮಾನುಜರು, ಈ ಮೂರು ಜನನ್ನ ಬಿಟ್ರೆ ಉಳಿದ ಅನುಭವಿಗಳ ಕಥೆ ಹೀಗೆಯೆ. ಜೋರೆ ಅಜ್ಜ ಜೋರೆ. ಪ್ರಶ್ನೆಗಳನ್ನು ಕೇಳ್ಳಿಕ್ಕೆ ಉಪಾಯ ಇಲ್ಲ. ವಿವರಣೆ ಇಲ್ಲ. ಸಾಧ್ಯ ಉಂಟು ಅವರಿಗೆ. ಆದರೆ ಕೊಡೋದಿಲ್ಲ.

ಅಜ್ಜ – ಕೊಡ್ಬೋದು. ನೀವು ಧ್ಯಾನಕ್ಕಿಳಿದ್ರೆ ಸರಿ. ಮನಸ್ಸು ಮೌನ ಆಗ್ಬೇಕು ಮೊದ್ಲು. ಎಲ್ಲಾ ಪ್ರಶ್ನೆಗಳು ಖಾಲಿ ಆಗ್ಬೇಕು. ಏನೂ ಕೋಪ ಇಲ್ಲಲ್ಲಾ. ನಾಲ್ಕು ದಿವಸ ಹತ್ತು ದಿವಸ ನಿತ್ತ ಕೂಡ್ಲೆ ನಿಮ್ಗೆ ಅಲ್ಲಿಯ ಆಲೋಚನೆ ಬರ್ತದೆ, ಅಲ್ಲಿಗೆ ಹೋಗ್ಬೇಕು ಅಂತ್ಹೇಳಿ.

ನಮ್ಗೆ ಆಲೋಚನೆ ಬರೋದೆ ಇಲ್ಲ. ಎಲ್ಲಿಗೆ ಹೋಗೋದು? ಹ್ಞಂ. ಹೀಗುಂಟು ಸ್ಥಿತಿ.

ಒಬ್ಬರು – ಇದನ್ನ ಹೇಗೆ ಪ್ರ್ಯಾಕ್ಟೀಸ್ ಮಾಡ್ಬೇಕು.

ಅಜ್ಜ – ಅಭ್ಯಾಸ ಅಂದ್ರೆ ನೀವು ಮೌನದಲ್ಲಿ ಕೂತ್ಕೋಬೇಕು. ಒಂದು ಗಂಟೆ ನೀವು ಮೌನದಲ್ಲಿ ಕೂತ್ರೆ ನಿಮಗೆ ಶೇಕ್ ಹ್ಯಾಂಡ್ ಕೊಡ್ತದೆ ನಾವು. ಒಂದು ಗಂಟೆ ಕೂತ್ರೆ ಸಾಕು.

ಒಬ್ಬರು – ಅದೇ ಏನು ಮಾಡೋದೂ ಅಂತ.

ಅಜ್ಜ – ಏನು ಮಾಡ್ಬೇಕು ಅಂದ್ರೆ, ಛೆ. ಊಟ ಮಾಡ್ಬೇಕು ಅಂದ್ರೆ ಏನು ಮಾಡ್ಬೇಕು. ಆ್ಞಂ.

ಒಬ್ಬರು – ಅಲ್ಲಿ ಅಡಿಗೆ ಮನೆಗೆ ಹೋಗ್ಬೇಕು.

ಅಜ್ಜ – ಹಾಗೆ ನೀವು ಮೌನದಲ್ಲಿರಿ. ಸುಮ್ಮನೆ ಕೂತ್ಕೋಬೇಕು. ದೇಹ ಮೌನದಲ್ಲಿರುವುದಲ್ಲ. ಅದನ್ನ ಒಪ್ಪೋದಿಲ್ಲ ನಾವು.

ಪರೀಕ್ಷಿತ – ಪ್ರಶ್ನೆಗಳಿಗೆ ಉತ್ತರ ದಯವಿಟ್ಟು ನೀವು ಕೊಡ್ಬೇಕು.

ಅಜ್ಜ – ಉತ್ತರ ಉಂಟು. ಆದ್ರೆ . . .

ಒಬ್ಬರು – ಮನಸ್ಸು ಸುಮ್ಮನೆ ಕುತ್ಕೊಳ್ಳಿಕ್ಕೆ ಏನು ಮಾಡ್ಬೇಕು ಅಂತ.

ಅಜ್ಜ – ಹಾಗ ಆಗ್ಬೇಕು ಅಂತ ನಿಮಗೆ ಉಂಟಾ.

ಒಬ್ಬರು – ಹೌದು.

ಅಜ್ಜ – ಇಲ್ಲ. ನಾವು ಗ್ಯಾರಂಟಿ ಕೊಡ್ತದೆ. ನಿಮಗೆ ಹಾಗೆ ಆಗ್ಬೇಕು ಅಂತ ಇಲ್ಲ.

ಒಬ್ಬರು – ಇದೆ ಅಜ್ಜ. ಮೌನದಲ್ಲಿ ಇರಬೇಕು ಅಂತ ಇದೆ. ನೀವು ಹೇಳ್ತೀರಲ್ಲ ಸುಮ್ಮನೆ ಕೂತ್ಕೊಳ್ಳಿ ಅಂತ.

ಅಜ್ಜ – ಯಾರಿಗೆ. ನಿಮಗೆ ಮೌನದಲ್ಲಿ ಕೂತ್ಕೊಳ್ಳಿಕ್ಕೆ ಇಷ್ಟ ಉಂಟಾ ಇಲ್ಲ. ಇಷ್ಟ ಇದ್ರೆ ಅದು ಯಾರಿಗೆ? ಹೇಳಿಯಪ್ಪಾ.

ಒಬ್ಬರು – ನನಗಜ್ಜ.

ಅಜ್ಜ – ನನಗೆ ಅಂದ್ರೆ ಯಾರಿಗೆ. ವಿವರ ಬೇಕು.

ಒಬ್ಬರು – ನಾನು ಯಾರು ಅಂತ ಗೊತ್ತಾದ ಮೇಲೆ ಧ್ಯಾನ ಮಾಡ್ಬಹುದಾ.

ಅಜ್ಜ – ಆ್ಞಂ.

ಒಬ್ಬರು – ಅಜ್ಜ ಹೇಳ್ತಾರೆ . . .

ಅಜ್ಜ – ಅಜ್ಜ ಹೇಳೋದಲ್ಲ. ನೀನು ಸ್ವಲ್ಪ ಈಚೆ ಬಾ. ಯಾರು ಹೇಳೋದು. ಅಜ್ಜ ಹೇಳೋದಾ. ಆ್ಞಂ. ಅಜ್ಜ ಹೇಳೋದಲ್ಲ. ಅಜ್ಜನ ದೇಹದಿಂದ ಮಾತುಗಳು ಬರ್ತದೆ. ಇದು ಅಜ್ಜ ಹೇಳೋದಲ್ಲ.

ಒಬ್ಬರು – ಸರಿ.

ಅಜ್ಜ – ಸರಿ ಅಂತ್ಹೇಳಿ ಮಾತಿನಿಂದ ಹೇಳಿದ್ರೆ ಸಾಲ್ದು. ಮನಸ್ಸಿನಲ್ಲಿ ಉಂಟು ಅಜ್ಜ ಹೇಳ್ತಾರೆ ಅಂತ್ಹೇಳಿ. ಅದು ಹೋಗ್ಬೇಕು. ಅದೆಲ್ಲ ಆಗೋದಿಲ್ಲಪ್ಪಾ. ನಾವು ಕಂಠೋಕ್ತ ಹೇಳೋದಾದ್ರೆ ನೋಡಿ, ನಿಮ್ಮ ಮನಸ್ಸಿನಲ್ಲಿ ಏನುಂಟು, ಏನುಂಟು ಈಗ. ಆ್ಹಂ. ಇಲ್ಲಿಂದ ಮಾತುಗಳು ಶಬ್ದಗಳು ಬರ್ತದೆ ಅಂತ್ಹೇಳಿ ಅಷ್ಟೆ. ಇಂಥವನು ಮಾತ್ನಾಡ್ತಾನೆ ಅಂತ್ಹೇಳಿ ಇಲ್ಲಿ ಇಲ್ಲ. ಅದು ಅಲ್ಲಿಯೂ ಹಾಗೆ ಉಂಟು. ಇದನ್ನು ಹ್ಯಾಗೆ ಕಂಡುಹಿಡಿಯೋದು ಅಂದ್ರೆ. ಇದು ಮಾದರೀ ರೂಪ. ಈ ಮಾದರಿಯನ್ನು ನೀವು ಅನುಸರಿಸಿದ್ರೆ, ನಿಮಗೂ ಹಾಗೆ ಆಗ್ಲಿಕ್ಕೆ ಸಾಧ್ಯತೆ ಇದೆ. ಹೌದು. ಅನುಸರಿಸ್ಲಿಕ್ಕೆ ತಯಾರಿದ್ದೀರಾ ನೀವು. ಇಲ್ಲ. ನೀವು ಕೃತಿಗೆ ಬನ್ನಿ.

ನೀವು ಕೆಲವು ವರ್ಷಗಳಿಂದ ಧ್ಯಾನ ಮಾಡ್ತಾ ಇದ್ದೀರಿ ಅಲ್ಲಾ. ಧ್ಯಾನ ಮಾಡುವವನ ಪರಿಚಯ ನಿಮಗುಂಟಾ? ಯಾರು? ಧ್ಯಾನ ಮಾಡುವವ ಯಾರು? ಹೇಳಿ. ಅದ್ರ ಅನುಭವ ನಿಮಗಿಲ್ಲದೇ ಇದ್ರೆ ಧ್ಯಾನ ಹೇಗೆ ಮಾಡ್ತೀರಿ. ಇಲ್ಲಿ ಇರೋದು ಈಗ. ನೀವು ಧ್ಯಾನ ಮಾಡೋದು ಯಾರನ್ನು.

ಒಬ್ಬರು – ಒಂದು ವಿಷಯದಲ್ಲಿ ಧ್ಯಾನ ಮಾಡಲ್ಲ.

ಅಜ್ಜ – ಸರಿ. ಮತ್ಯಾವುದ್ರ ಮೇಲೆ ಧ್ಯಾನ ಮಾಡ್ತೀರಿ.

ಒಬ್ಬರು – ಸುಮ್ಮನೆ ಕುತ್ಕೊಳ್ಳಿಕ್ಕೆ ಪ್ರ್ಯಾಕ್ಟೀಸ್ ಮಾಡ್ತಾ ಇದ್ದೇನೆ.

ಅಜ್ಜ – ಅದೆಲ್ಲ ಆಗೋದಿಲ್ಲ.

ಒಬ್ಬರು – ವಿಷಯದಲ್ಲಿ ಧ್ಯಾನ ಮಾಡೋದಿಲ್ಲ.

ಅಜ್ಜ – ಅದನ್ನ ನಾವು ಕೇಳಲೇ ಇಲ್ಲ. ಮತ್ತೆ ಯಾವುದರ ಮೇಲೆ ಧ್ಯಾನ ಮಾಡ್ತೀರಿ.

ಒಬ್ಬರು – ಯಾವುದರ ಮೇಲೂ ಮಾಡೋದಿಲ್ಲ. ಸುಮ್ನೆ ಕುತ್ಕೋತೀನಿ. ಅದನ್ನೇ ಧ್ಯಾನ ಅಂತ ಹೇಳ್ತೀನಿ.

ಅಜ್ಜ – ಸುಮ್ನೆ ಕೂತ್ಕೊಳ್ಳಿಕ್ಕೆ ಆಕ್ತದಾ.

ಒಬ್ಬರು – ಅದೇ ಆಗ್ತಾ ಇಲ್ಲ. ಅದನ್ನೇ ಕೇಳಿದ್ದು.

ಅಜ್ಜ – ಹಾಗಾದ್ರೆ ನೀವಿನ್ನು ಪ್ರಾರಂಭನೇ ಮಾಡ್ಲಿಲ್ಲ.

ಒಬ್ಬರು – ಇರಬಹುದು ನನಿಗೊತ್ತಿಲ್ಲ.

ಅಜ್ಜ – ಯಾರಿಗೊತ್ತಿಲ್ಲ.

ಒಬ್ಬರು – ನನಿಗೆ.

ಅಜ್ಜ – ಹಾಂ. ಅಲ್ಲಿ ಇರೋದು. ಹಾಗೆ ಬರ್ಬೇಕಷ್ಟೆ. ನಾವು ೧೫–೨೦ ವರ್ಷಗಳಿಂದ ಧ್ಯಾನ ಮಾಡ್ತಾ ಇದ್ದೇವೆ ಅಂತ ಹೇಳುವವರು ಇಲ್ಲಿ ಬಂದಿದ್ದಾರೆ. ಅವ್ರು ಹೇಳ್ತಾರೆ ನಮಗೆ ಇನ್ನೂ ಮನಸ್ಸಿಗೆ ಶಾಂತಿ ಸಿಕ್ಕಿಲ್ಲಾ ಅಂತ್ಹೇಳಿ.

ನಮ್ಮ ಜೀವನದಲ್ಲಿ ಏನು ನಡೆದು ಬಂತೋ ಅದನ್ನು ಮಾತ್ರ ಹೇಳ್ಳಿಕ್ಕೆ ನಮಗೆ ರೈಟ್ ಉಂಟು. ನಾವು ಹೇಳಿದ್ದಕ್ಕೆ ಉಳಿದದ್ದು ಅನುಗುಣವಾಗಿ ಬರ್ಬಹುದು. ಆದ್ರೆ ಅದನ್ನು ನೋಡಿ ನಾವು ಹೇಳೋದಿಲ್ಲ. ಕೃಷ್ಣ ಏನು

ಹೇಳಿದ್ದಾನೆ ಗೀತೆಯಲ್ಲಿ – "ಪ್ರತಿಯೊಂದು ದೇಹದಲ್ಲಿರುವವನು ನಾನು" ಅಂತ ಅಲ್ವಾ. ಇಲ್ಲಿಯೂ ಹೇಳ್ತದೆ. "ಪ್ರತಿಯೊಂದು ದೇಹದಲ್ಲಿರುವವನು ನಾನು" ಅಂತ. ಅದನ್ನು ನೋಡಿ ಹೇಳೋದಿಲ್ಲ. ಇಲ್ಲಿ ಕಂಡದ್ದನ್ನು ಹೇಳ್ತದೆ.

ಒಬ್ಬರು – ಈ ಅನುಭವ ಎಲ್ಲಾರಿಗೂ ಬರ್ತದಾ.

ಅಜ್ಜ – ಹೌದು ಬರ್ಲೆ ಬೇಕಲ್ಲಾ. ಇಲ್ಲಿ ಬಂದಿದೆ ಅಂತ ಆದ್ರೆ ಅಲ್ಲಿಯೂ ಬರಬಹುದಲ್ಲಾ.

ಒಬ್ಬರು – ಅಲ್ಲಿ ಬಂದಿದೆ. ಇಲ್ಲಿ ಯಾಕೆ ಇನ್ನು ಬರ್ತಾ ಇಲ್ಲ.

ಅಜ್ಜ – ನೀವು ಅಂಥಾ ಕರ್ಮ ಮಾಡಿಲ್ಲ. ಆ ರೀತಿ ಕರ್ಮ ಮಾಡಿ ನೋಡಿ ನೀವು.

ಒಬ್ಬರು – ಯಾವ್ದು ಆ ಕರ್ಮ.

ಅಜ್ಜ – ಹೇಳಿ ಆಗಿದೆಯಲ್ಲ. ನೀವು ನೋಡಿ.

ಒಬ್ಬರು – ನೀವೇ ಹೇಳಿ.

ಅಜ್ಜ – ಹೇಳಿ ಆಗಿದೆ. ಪದೇ ಪದೇ ಹೇಳುವುದಲ್ಲ. ಅದೇನು ಸಂತೆಯಲ್ಲಿ ಮಾರಾಟಕ್ಕೆ ಸಿಕ್ಕುವ ವಸ್ತುವಾ ಅದು. ಕರ್ದು ಕರ್ದು ಕೊಡ್ಲಿಕ್ಕೆ. ನಿಮಗಲ್ಲ ಹೇಳಿದ್ದು. ಕೇಳುವವರಿಗೆ ಹೇಳಿದ್ದು. ನಾವು ಹೇಳಬಹುದು. ಆದ್ರೆ ಅವ ಮಾಡ್ತಾನಾ. ಅವ್ನು ತಯಾರಿದ್ದಾನಾ ಮಾಡ್ಲಿಕ್ಕೆ. ಅ್ಞಂ. ಇವ ಹೇಳಿದ್ದು ಬಂತು ಅಷ್ಟೆ. ಅವ ತಯಾರಿಲ್ಲ. ಮತ್ತೆ ಹೇಳುವುದು ಯಾಕೆ, ನೋಡುವ ಸನ್ನಿವೇಶ ಬರ್ಲಿ ಅಂಥದ್ದು. 'ದಿವ್ಯ ಜೀವನ' ಅಂತ್ಹೇಳಿ ಉಂಟಲ್ಲ. ಅದ್ರಲ್ಲಿ ಬರ್ದದ್ದು ಹೇಗೆ. ನೋಡಿ ಅದ್ರಲ್ಲಿ ಎಲ್ಲ ಉಂಟು.

ನೋಡಿ ಈಗ ನೀರು ತಂದ್ರು, ಕೊಟ್ರು. ನಾವು ಕುಡಿದು ಆಯ್ತು. ಅವ್ರು ತಂದು ಕೊಟ್ಟದ್ದನ್ನು ಕುಡಿಯದೇ ಇದ್ರೆ? . . . ಅ್ಞಂ. ಹಾಗೆ ಇಲ್ಲಿಂದ ಬಂದದ್ದನ್ನು ಮಾಡ್ಲಿಕ್ಕೆ ತಯಾರಿದ್ದೀರಾ ನೀವು. ಮಾಡದೆ ಇದ್ರೆ. ಹೇಳಿದ್ದಕ್ಕೆ ಏನು ಪ್ರಯೋಜನಾಪ್ಪ. ನೋಡುವ ನೀವು ತಯಾರಾಗಿ.

*****